بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّي عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 03

ಸಂಚಿಕೆ: 23

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

09 ಜೂನ್ 2022, 09 ಇಹ್ಸಾನ್ 1401 ಹಿಜರಿ ಶಮ್‌ಸಿ,
08 ಧ಼ಿಲ್ ಖ಼ಅ್‌ದಃ 1443 ಹಿಜರಿ ಖ಼ಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَاَطِيْعُوا اللّٰهَ وَاَطِيْعُوا الرَّسُوْلَ
وَاحْذَرُوْا ۚ فَاِنْ تَوَلَّيْتُمْ فَاعْلَمُوْٓا اَنَّمَا عَلٰى
رَسُوْلِنَا الْبَلٰغُ الْمُبِيْنُ

(ಅಲ್ ಮಾಇದಃ : 93)

ಅಂದರೆ: ನೀವು ಅಲ್ಲಾಹನಿಗೆ ವಿಧೇಯರಾಗಿರಿ ಮತ್ತು ಈ ಸಂದೇಶವಾಹಕನಿಗೂ ವಿಧೇಯರಾಗಿರಿ ಹಾಗೂ ಜಾಗರೂಕರಾಗಿದ್ದುಕೊಳ್ಳಿರಿ. ಆದರೆ ನೀವು ವಿಮುಖರಾದರೆ, ನಮ್ಮ ಸಂದೇಶವನ್ನು ಸ್ಪಷ್ಟವಾದ ರೀತಿಯಲ್ಲಿ ನಿಮಗೆ ತಲಪಿಸುವುದು ಮಾತ್ರವೇ ನಮ್ಮ ಸಂದೇಶವಾಹಕನ ಕರ್ತವ್ಯವೆಂದು ತಿಳಿದುಕೊಳ್ಳಿರಿ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಸಮಯಕ್ಕೆ ತಕ್ಕ ಸಂಪತ್ತಿನ ತ್ಯಾಗ ಮತ್ತು ಇತರರಿಗೆ ವಿದ್ಯೆ ಕಲಿಸುವ ಮಹತ್ವ

(1409) ಹಝ್ರತ್ ಇಬ್ನು ಮಸ್‌ಊದ್(ರ) ರವರ ವರದಿ ಇದೆ. ಅವರು ಹೇಳುತ್ತಾರೆ. ನಾನು ನಬಿ(ಸ) ರಿಂದ ಆಲಿಸಿರುವೆನು. ಅವರು (ಸ) ಹೇಳುತ್ತಿದ್ದರು. ಇಬ್ಬರು (ಮನುಷ್ಯರ) ಮೇಲೆ ಈರ್ಷ್ಯೆ ಪಡಬಾರದು. ಅಲ್ಲಾಹನು ಸಂಪತ್ತು ನೀಡಿರುವ ವ್ಯಕ್ತಿಯೊಬ್ಬನಿಗೆ ತಕ್ಕ ಸಮಯದಲ್ಲಿ ಆ ಸಂಪತ್ತು ಖರ್ಚು ಮಾಡುವ ಭಾಗ್ಯ ದಯಪಾಲಿಸಿರಬೇಕು ಮತ್ತು ಆ ವ್ಯಕ್ತಿಗೆ ಅಲ್ಲಾಹನು ಸರಿಯಾದ ವಿದ್ಯೆ ನೀಡಿರಬೇಕು, ಅವನು ಸ್ವಯಂ ಆ ವಿದ್ಯೆಯ ಪ್ರಕಾರ ನಡೆದುಕೊಳ್ಳಬೇಕು ಮತ್ತು ಜನರಿಗೆ ಸಹ ಕಲಿಸಬೇಕು.

### ಸದಖಾ, ಝುಕಾತ್ (ದಾನ) ಪರಿಶುದ್ಧ ಸಂಪತ್ತಿನಿಂದ ನೀಡಬೇಕು.

ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ ಪ್ರವಾದಿ(ಸ) ರವರು ನುಡಿದರು: ದುಡಿಮೆಯಿಂದ ಒಂದು ಖಜೂರರರ ಸಮಾನವೇ ಸರಿ ದಾನ (ಸದಖಾ) ನೀಡಿದರೆ ಅಲ್ಲಾಹನು ಅದನ್ನು ಸ್ವೀಕರಿಸುತ್ತಾನೆ. ಅಲ್ಲಾಹನು ತನ್ನ ಬಲಗೈಯಿಂದ ಆ ದಾನವನ್ನು ಸ್ವೀಕರಿಸುತ್ತಾನೆ ಮತ್ತು ಆ ದಾನ ಮಾಡುವವನ ಸಂಪತ್ತನ್ನು ವೃದ್ಧಿಗೊಳಿಸುತ್ತಾನೆ. ಎಲದಲಿಯ ತನಕ ಎಂದರೆ ಆ ದಾನವು ಪರ್ವತದ ಮಟ್ಟಕ್ಕೆ ತಲುಪುತ್ತದೆ.

**(ಸಹೀಹ್ ಬುಖಾರಿ, ಸಂಪುಟ-3, ಕಿತಾಬುಝ್ಝುಕಾತ್, 2008 ಖಾದಿಯಾನ್)**

**ಮಾನವ ದೌರ್ಬಲ್ಯಕ್ಕೆ ಜಾಗವಿಲ್ಲ, ಸರ್ವಶಕ್ತನಾದ ಅಲ್ಲಾಹನ ಅನುಗ್ರಹ ಮತ್ತು ಬೆಂಬಲವಿಲ್ಲದೆ ಒಂದು ಹೆಜ್ಜೆಯೂ ಮುಂದಿಡಲು ಸಾಧ್ಯವಿಲ್ಲ. ದೌರ್ಬಲ್ಯಗಳು ಒಟ್ಟುಗೂಡಿದಾಗ, ಶಾಂತಿ ಮತ್ತು ನೆಮ್ಮದಿಯನ್ನು ಹೊಂದುವ ಏಕೈಕ ಮಾರ್ಗವೆಂದರೆ ಸರ್ವಶಕ್ತನಾದ ಅಲ್ಲಾಹನೊಂದಿಗೆ ತನ್ನ ವ್ಯವಹಾರಗಳನ್ನು ಶುದ್ದವಾಗಿರಿಸುವುದು.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಫಾನಿ ಫಿಲ್ಲಾಹ್‌ನ ಸ್ಥಾನ

ಸರ್ವಶಕ್ತನಾದ ಅಲ್ಲಾಹನ ಅನುಗ್ರಹ ಮತ್ತು ಬೆಂಬಲವಿಲ್ಲದೆ ಮನುಷ್ಯನು ಏನನ್ನೂ ಮಾಡಲು ಸಾಧ್ಯವಿಲ್ಲ. ಸರ್ವಶಕ್ತನಾದ ಅಲ್ಲಾಹನ ಕಡೆಗೆ ಮನುಷ್ಯನು ಬಾಗಿದಾಗ ಮತ್ತು ಅಲ್ಲಾಹನಲ್ಲಿ ತಲ್ಲೀನನಾದಾಗ ಅವನಿಂದ ದೈವಿಕ ಕಾರ್ಯಗಳು ಜರಗುತ್ತವೆ. ಅವನಲ್ಲಿ ಉತ್ತಮ ಪ್ರಕಾಶವು ವ್ಯಕ್ತವಾಗುತ್ತವೆ. ಮಾನವನ ದೌರ್ಬಲ್ಯಕ್ಕೆ ಜಾಗವಿಲ್ಲ, ಪರಮಾತ್ಮನ ಕೃಪೆ ಮತ್ತು ಬೆಂಬಲವಿಲ್ಲದೆ ಅವನು ಒಂದು ಹೆಜ್ಜೆ ಇಡಲು ಸಾಧ್ಯವಿಲ್ಲ, ನಾನು ಎಲ್ಲಿಯವರೆಗೆ ಅಲ್ಲಾಹನ ಮೇಲೆ ಭರವಸೆ ಇಡುತ್ತೇನೆ ಎಂದರೆ ಅಲ್ಲಾಹನ ಬೆಂಬಲವಿಲ್ಲದೆ ಮಾನವ ತನ್ನ ಅವಶ್ಯಕತೆಯ ನಂತರ ತನ್ನ ಲಾಡಿಯನ್ನು ಸಹ ಕಟ್ಟಲು ಸಾದ್ಯವಾಗದು. ಒಬ್ಬ ವ್ಯಕ್ತಿಯು ಸೀನು ಬಂದರೆ ಸಾಯುತ್ತಾನೆ ಎಂದು ವೈದ್ಯರು ರೋಗವನ್ನು ಬರೆದಿದ್ದಾರೆ. ಮನುಷ್ಯ ದೌರ್ಬಲ್ಯಗಳ ಸಂಯೋಜನೆಯಾಗಿದ್ದಾನೆ, ಆದ್ದರಿಂದಲೇ ಅಲ್ಲಾಹನು **ಖುಲಿಖಲ್ ಇನ್ಸಾನು ಝಯೀಫ** (ಅನ್ನಿಸಾಅ್:29) ಎಂದು ಹೇಳಿದನು. ಮನುಷ್ಯನ ಸೃಷ್ಟಿಯು ದುರ್ಬಲವಾಗಿದೆ ಆದ್ದರಿಂದ ಅವನಿಗೆ ಅವನ ಬಗ್ಗೆಯೇ ಅರಿವಿಲ್ಲ. ತಲೆಯಿಂದ ಪಾದದವರೆಗೆ ಇರುವ ಅಂಗಗಳಿಗಿಂತ ಹೆಚ್ಚು ರೋಗಗಳು ಅವನನ್ನು ಬಾಧಿಸುತ್ತವೆ ಹೀಗಿದ್ದಲ್ಲಿ ಅವನಲ್ಲಿ ಇಷ್ಟು ದೌರ್ಬಲ್ಯಗಳು ಒಟ್ಟುಗೂಡಿದಾಗ ಅವನು ಶಾಂತಿ ಮತ್ತು ನೆಮ್ಮದಿಯನ್ನು ಹೊಂದುವ ಏಕೈಕ ಮಾರ್ಗವೆಂದರೆ ಅಲ್ಲಾಹನೊಂದಿಗೆ ತನ್ನ ವ್ಯವಹಾರಗಳನ್ನು ಶುದ್ಧವಾಗಿರಬೇಕು ಮತ್ತು ಅವನು ಅಲ್ಲಾಹನ ನಿಜವಾದ ಮತ್ತು ನಿಷ್ಠಾವಂತ ದಾಸನಾಗಿರಬೇಕು ಮತ್ತು ಅದಕ್ಕಾಗಿ ಅವನು ಸತ್ಯವನ್ನು ಅಳವಡಿಸಿಕೊಳ್ಳುವುದು ಅವಶ್ಯಕವಾಗಿದೆ. ಇಡೀ ಭೌತಿಕ ವ್ಯವಸ್ಥೆಯೇ ಸತ್ಯದ ಮೇಲೆ ಅವಲಂಬಿತವಾಗಿದೆ. ಸತ್ಯವನ್ನು ತ್ಯಜಿಸಿ ದ್ರೋಹದಿಂದ ಅಪರಾಧವನ್ನು ಆಶ್ರಯಿಸುವ ಮಹಾಸುಳ್ಳನ್ನು ಯೋಚಿಸುವವರು ಘೋರ ದೋಷದಲ್ಲಿದ್ದಾರೆ.

### ಸುಳ್ಳು ಮನುಷ್ಯನ ಹೃದಯವನ್ನು ಕತ್ತಲೆ ಮಾಡುತ್ತದೆ

ಮನುಷ್ಯನು ತಾತ್ಕಾಲಿಕವಾಗಿ ಕೆಲವು ಪ್ರಯೋಜನಗಳನ್ನು ಅರ್ಥಮಾಡಿಕೊಳ್ಳಬಹುದು, ಆದರೆ ವಾಸ್ತವವಾಗಿ, ಸುಳ್ಳನ್ನು ಅಳವಡಿಸಿಕೊಂಡರೆ, ಒಬ್ಬನ ಹೃದಯವು ಕತ್ತಲೆಯಾಗುತ್ತದೆ ಮತ್ತು ಅವನೊಳಗೆ ಒಂದು ಗೆದ್ದಲು ಕಾಣಿಸಿಕೊಳ್ಳುತ್ತದೆ, ಒಂದು ಸುಳ್ಳಿಗಾಗಿ, ಅವನು ಅನೇಕ ಸುಳ್ಳನ್ನು ನಿರ್ಮಿಸಬೇಕಾಗುತ್ತದೆ, ಏಕೆಂದರೆ ಅವನು ಆ ಸುಳ್ಳಿಗೆ ನೈಜತನದ ಬಣ್ಣ ನೀಡಬೇಕಾಗುತ್ತದೆ. ಹೀಗೆ ಅವನ ನೈತಿಕತೆ ಮತ್ತು ಆಧ್ಯಾತ್ಮಿಕ ಶಕ್ತಿಯು ಒಳಗಿನಿಂದ ಕಣ್ಮರೆಯಾಗುತ್ತದೆ ಮತ್ತು ನಂತರ ಅವನು ತುಂಬಾ ಧೈರ್ಯಶಾಲಿಯಾಗುತ್ತಾನೆ, ಅವನು ಸರ್ವಶಕ್ತನಾದ ಅಲ್ಲಾಹನನ್ನು ನಿಂದಿಸುತ್ತಾನೆ ಮತ್ತು ಅಲ್ಲಾಹನ ಸಂದೇಶವಾಹಕನನ್ನು ನಿರಾಕರಿಸುತ್ತಾನೆ. ಮತ್ತು ಅವನು ಅಲ್ಲಾಹನ ದೃಷ್ಠಿಯಲ್ಲಿ "ಅಝ್‌ಲಮ" ನಾಗುತ್ತಾನೆ. ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ನುಡಿಯುತ್ತಾನೆ: **ಮನ್ ಅಜ಼್ಲಮ ಮಿಮ್ಮನಿಫ್‌ತರ ಅಲಲ್ಲಾಹಿ ಕಝಿಬ ಔ ಕಝ್ಝಬ ಬಿಆಯಾತಿಲ್ಲಾಹಿ** (ಅಲ್‌ಅನ್‌ಆಮ್: 21) ಅಂದರೆ ಅಲ್ಲಾಹನ ಬಗ್ಗೆ ಸುಳ್ಳನ್ನು ಸೃಷ್ಟಿಸಿ ಹೇಳುವವನಿಗಿಂತ ಅಥವಾ ಅವನ ದೃಷ್ಟಾಂತಗಳನ್ನು ಸುಳ್ಳೆಂದು ಬಗೆಯುವವನಿಗಿಂತ ದೊಡ್ಡ ಅಧರ್ಮಿ ಯಾರು? ಖಂಡಿತವಾಗಿಯೂ ಅಧರ್ಮಿಗಳು ವಿಜಯ ಹೊಂದಲಾರರು. ಸುಳ್ಳು ಹೇಳುವುದು ತುಂಬಾ ಕೆಟ್ಟ ವಿಪತ್ತಾಗಿದೆ ಎಂದು ಖಂಡಿತವಾಗಿ ನೆನಪಿಡಿ. ಅದು ಮನುಷ್ಯನನ್ನು ನಾಶಮಾಡುತ್ತದೆ. ಮನುಷ್ಯನು ಸರ್ವಶಕ್ತನಾದ ಅಲ್ಲಾಹನ ಸಂದೇಶವಾಹಕರನ್ನು ಮತ್ತು ಆತನ ವಚನಗಳನ್ನು ನಿರಾಕರಿಸುವ ಮೂಲಕ ಶಿಕ್ಷೆಗೆ ಅರ್ಹನಾಗಿದ್ದಾನೆ ಎನ್ನುವುದಕ್ಕಿಂತಲೂ ಸುಳ್ಳು ಹೇಳುವುದರಿಂದ ಹೆಚ್ಚು ಅಪಾಯಕಾರಿ ಪರಿಣಾಮವಿದೆ. ಆದ್ದರಿಂದ ಸತ್ಯವಂತರಾಗಿರಿ.

**(ಮಲ್‌ಫೂಝಾತ್, ಸಂಪುಟ-1, ಪುಟ-333, ಖಾದಿಯನ್ 2018)**

### ದಿವ್ಯದೂತರು (ಮಲಾಯಿಕ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ." ***(ಫತ್‌ಹೆ ಇಸ್ಲಾಮ್; ರೂಹಾನೀ ಖ಼ಝಾಇನ್ ಸಂಪುಟ 3, ಪುಟ 12)***

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ۞ شَرُّ السُّمُوْمِ عَدَاوَةُ الصُّلَحَاءِ

**ನನ್ನ ಆಹ್ವಾನದ ಬಗ್ಗೆ ಆಕ್ಷೇಪ ಮಾಡುವ ಮುಲ್ಲಾಗಳು ಈ ಕಾಲದ ಯಾವುದೇ ಪಾದ್ರಿಯರನ್ನು ನನ್ನ ಮುಂದೆ ತಂದು ಈ ವಿಧಾನದ ಪ್ರಕಾರ ಪರೀಕ್ಷಿಸಿ ನೋಡಲಿ, ನಾನು ಪರಾಜಿತನಾದರೆ ಎಲ್ಲ ಆಸ್ತಿಗಳು ಅವರಿಗೆ ಒಪ್ಪಿಸುವೆನು.**

ಈ ಪಂಥಹ್ವಾನ ನಾವು ಸಯ್ಯಿದ್‌ನ ಹಝ್ರತ್ ಮಸೀಹ್ ಮೌಊದ್(ಅ) ರವರ ಮೇರು ಕೃತಿ ಆಯಿನ ಕಮಾಲಾತೆ ಇಸ್ಲಾಮ್‌ನಿಂದ ಪ್ರಸ್ತುತಪಡಿಸುತ್ತಿದ್ದೇವೆ. ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ)ರವರು ಈ ಗ್ರಂಥದಲ್ಲಿ ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್(ರ)ರವರು ಹಝ್ರತ್ ಮಸೀಹ್ ಮೌಊದ್ (ಅ)ರವರಿಗೆ ಬರೆದಿರುವ ಒಂದು ಪತ್ರವನ್ನು ಪ್ರಕಟಗೊಳಿಸಿದರು. ಆ ಪತ್ರದಲ್ಲಿ ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್(ರ)ರವರು ಬರೆದರು: ನೀವು 'ಮಸೀಲೆ ಮಸೀಹ್' ಆಗುವ ದಾವೆಯಿಂದ ಈವರೆಗಿನ ಸ್ಥಿತಿ ತುಂಬ ಸಂಶಯಾತ್ಮಕವಾಗಿದೆ. ಒಮ್ಮೊಮ್ಮೆ ನೀವು ಮಾಡಿರುವ ದಾವೆಯು ಸರಿಯಾಗಿದೆ ಎಂದು ಕಂಡು ಬಂದರೆ ಒಮ್ಮೊಮ್ಮೆ ಸಂಶಯಗಳು ಆವರಿಸಿಕೊಳ್ಳುತ್ತವೆ. ಆದುದರಿಂದ ಸತ್ಯತೆಯನ್ನು ಸಾಬೀತುಪಡಿಸಲು ಈ ಕೆಳಗೆ ನಮೂದಿಸಿದ ಕಾರ್ಯಗಳು ಆಗಬೇಕಾಗಿದೆ. 1) ವಿರೋಧಿಗಳನ್ನು ಮುಬಾಹಲಕ್ಕೆ (ಪ್ರಾರ್ಥನಾ ಸಮರಕ್ಕಾಗಿ) ಆಹ್ವಾನಿಸಬೇಕು. 2) ಯಾವುದೇ ಕಾರ್ಯ ಚಮತ್ಕಾರದಿಂದ ಕೂಡಿರಬೇಕು ಅದು ಜನರಿಗೆ ನ್ಯಾಯತೀರ್ಪು ನೀಡುವಂತಿರಬೇಕು. ಅದಕ್ಕೆ ಉತ್ತರ ನೀಡುವ ಮೊದಲು ಸಯ್ಯಿದನಾ ಹಝ್ರತ್ ಮಸೀಹ್ ಮೌಊದ್(ಅ)ರವರು ಈ ವಿವರಣೆ ನೀಡಿದರು. ಈ ಪತ್ರ ನವಾಬ್ ಸಾಹಿಬ್ ಅವರ ಇನ್ನೊಬ್ಬ ಸತ್ಯಾನ್ವೇಷಕರಿಗೆ ಬರೆದಿದ್ದೇನೆಯೇ ವಿನಃ ಸ್ವಯಂ ನವಾಬ್ ಸಾಹಿಬ್ ಇಮಾಮರೊಂದಿಗೆ ಒಂದು ವಿಶೇಷವಾದ ಪ್ರೀತಿಯ ಸಂಬಂಧ ಹೊಂದಿರುವರಾಗಿದ್ದಾರೆ ಮತ್ತು ಈ ಸಂಘಟನೆಗೆ ಆತ್ಮೀಯರಾಗಿದ್ದರು. ಅನಂತರ ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರು ಆ ಪತ್ರಕ್ಕೆ ಉತ್ತರ ಬರೆದರು ಮತ್ತು ಎಲ್ಲ ಕಾರ್ಯಗಳ ವಿವರಣೆಯ ಜೊತೆಗೆ ತನ್ನ ಸತ್ಯತೆಯ ಕುರಿತು ಐದು ಸಾಕ್ಷ್ಯಗಳು ಸಹ ವಿವರಿಸಿಕೊಟ್ಟರು. ಉತ್ತರ ಬರೆಯುವುದಕ್ಕೆ ಮೊದಲು ಬರೆದರು. ಈ ಪತ್ರವನ್ನು ಕನಿಷ್ಠಪಕ್ಷ ಮೂರು ಸಲ ಗಮನವಹಿಸಿ ಓದಿ, ಈ ಪತ್ರವು ನೋಡಲಿಕ್ಕೆ ನಿಮ್ಮ ಹೆಸರಿಗಿದೆ. ಆದರೆ ಇದರ ಹಲವು ಬರವಣಿಗೆ ಇತರರ ಸಂಶಯಗಳನ್ನು ದೂರ ಮಾಡಲಿಕ್ಕಿದೆ. ಸಯ್ಯಿದ್‌ನ ಹಜ್‌ರತ್ ಮಸೀಹ್ ಮೌಊದ್(ಅ) ತನ್ನ ಸತ್ಯತೆ ಕುರಿತು ನಾಲ್ಕು ಪುರಾವೆಯನ್ನು ವಿವರಿಸಿದರು. ಅದರಲ್ಲಿ ಅವರು ಮೇಲ್ಕಾಣಿಸಿದ ಗಾಂಭೀರ್ಯ ಭರಿತ ಬಹುಮಾನಾಧಾರಿತವಾದ ಪಂಥಹ್ವಾನ ತಿಳಿಸಿದರು. ಈ ಕೆಳಗೆ ಅವರು ವಿವರಿಸಿದ 5 ಸತ್ಯಸಾಕ್ಷ್ಯಗಳನ್ನು ಬರೆಯಲಾಗುತ್ತದೆ. ಅವರು ಹೇಳುತ್ತಾರೆ:

"ಸತ್ಯ ಅನ್ವೇಷಿಯಾದವನು ಒಂದು ಪ್ರಶ್ನೆ ಇಲ್ಲಿ ಮಾಡಬಹುದಾಗಿದೆ. ಅದೇನೆಂದರೆ -- ಮಸೀಹ್ ಮೌಊದ್ ಎಂದು ಒಪ್ಪಿಕೊಳ್ಳಲು ಯಾವ ಸಾಕ್ಷ್ಯಗಳಿವೆ. ಏಕೆಂದರೆ ಯಾವುದೇ ಸತ್ಯವಾದಿಯನ್ನು ಪರೀಕ್ಷಿಸಲು ಸತ್ಯತೆಯ ಕುರಿತು ಸಾಕ್ಷ್ಯಗಳಿರುತ್ತವೆ. ವಿಶೇಷವಾಗಿ ಇಂದಿನ ಕಾಲದಲ್ಲಿ ಅದು ಮೋಸ ವಂಚನೆ ಅಪ್ರಮಾಣಿಕತೆಯಿಂದ ಕೂಡಿದೆ ಮತ್ತು ಮಿಥ್ಯವಾದಿಗಳ ಅರ್ಭಟ ಜೋರಾಗಿದೆ. ಈ ಪ್ರಶ್ನೆಯ ಉತ್ತರದಲ್ಲಿ ನನಗೆ ಹೇಳಲಿಕ್ಕಿರುವುದು, ಕೆಳಗೆ ನಮೂದಿತ ಮಾತುಗಳು ಸತ್ಯಾನ್ವೇಷಕರಿಗೆ ಸತ್ಯವನ್ನು ತಿಳಿಯಲು ಮೆಟ್ಟಿಲುಗಳಾಗಿವೆ ಎಂದು.

1) ಮೊದಲನೆಯದಾಗಿ ರಸೂಲುಲ್ಲಾಹ್(ಸ) ಅವರ ನಿರಂತರವಾದ ಭವಿಷ್ಯವಾಣಿಗಳು ಅರ್ಥವತ್ತಾಗಿದೆ. ಅದರ ಅರ್ಥವೇನೆಂದರೆ ಅಲ್ಲಾಹನು ವಾಗ್ದಾನ ನೀಡಿರುವನು. ಪ್ರತಿಯೊಂದು ಶತಮಾನದಲ್ಲಿ ಧರ್ಮವನ್ನು ಪುನಃಶ್ಚೇತನಗೊಳಿಸಲು, ಅದರ ದೌರ್ಬಲ್ಯಗಳನ್ನು ದೂರಿಕರಿಸಲು ಮತ್ತೆ ಅದನ್ನು ವಾಸ್ತವರೂಪದಲ್ಲಿ ಪುನಃ ತರಲು ಒಬ್ಬ ಸುಧಾರಕರನ್ನು ಕಳುಹಿಸುವನು. ಈ ಭವಿಷ್ಯವಾಣಿಯ ಪ್ರಕಾರ ಈ ಹದಿನಾಲ್ಕನೆಯ ಶತಮಾನದಲ್ಲೂ ಅಂತಹ ಒಬ್ಬ ಸುಧಾರಕನ ಆಗಮನ ಅವಶ್ಯವಾಗಿತ್ತು. ಅವರು ಧರ್ಮದಲ್ಲಿ ಉಂಟಾದ ನ್ಯೂನತೆಗಳನ್ನು ಹೋಗಲಾಡಿಸಬೇಕಾಗಿತ್ತು. ಆದುದರಿಂದ ಈ ವಿನೀತನು ಸರಿಯಾದ ಸಮಯಕ್ಕೆ ನಿಯುಕ್ತಿಗೊಂಡಿರುವನು. ಇದಕ್ಕಿಂತ ಮುಂಚೆ ನೂರಾರು ಸೂಫಿ ಸಂತರು ತನ್ನ ದೇವವಾಣಿಯ ಮೂಲಕ ಸಾಕ್ಷ್ಯ ನೀಡಿರುವರು. ಹದಿನಾಲ್ಕನೆ ಶತಮಾನದ ಸುಧಾರಕನು ವಾಗ್ದತ್ತ ಮಸೀಹ್ ಆಗಿರುವನು. ಸಹೀ ಹದೀಸುಗಳು ಸ್ಪಷ್ಟ ರೂಪದಲ್ಲಿ ಸಾಧರಪಡಿಸುತ್ತಿವೆ. ಹದಿಮೂರನೇ ಶತಮಾನದ ನಂತರ ಮಸೀಹನು ಆಗಮಿಸುವನು. ವಿನೀತನ ಈ ದಾವೆ ಸರಿಯಾದ ಸಮಯಕ್ಕನುಗುಣವಾಗಿದೆ. ತರ್ಕಬದ್ಧವಾಗಿದೆ. ರಸೂಲುಲ್ಲಾಹ್(ಸ) ರವರ ವಚನ ಸುಳ್ಳಾಗಲು ಸಾಧ್ಯವೆ? ನಾನು ಈ ಮಾತನ್ನು ಸಾಬೀತುಗೊಳಿಸಿದ್ದೇನೆ. ಹದಿನಾಲ್ಕನೆ ಶತಮಾನದ ತುದಿಯಲ್ಲಿ ವಾಗ್ಧತ್ತ ಮಸೀಹ ಆಗಮಿಸದಿರುತ್ತಿದ್ದರೆ ಹಝ್ರತ್ ರಸೂಲುಲ್ಲಾಹ್(ಸ) ರವರ ಭವಿಷ್ಯವಾಣಿಗಳು ನಿರರ್ಥಕಗೊಳ್ಳುತ್ತಿದ್ದವು ಮತ್ತು ನುರಾರು ಸೂಫಿ ಸಂತರ ದೇವವಾಣಿಗಳು ಮಿಥ್ಯವಾಗುತ್ತಿದ್ದವು.

2) ಈ ವಿಷಯ ಯೋಚಿಸಲು ಅರ್ಹವಾಗಿದೆ. ಉಲಮಾಗಳಿಗೆ ಹದಿನಾಲ್ಕನೆ ಶತಮಾನದ ಮುಜದ್ದೀದ್ (ಧರ್ಮಸುಧಾರಕ) ನನ್ನ ಹೊರತು ಯಾರು ದಾವೆ ಹೂಡಿರುವರು? ಯಾರು ಅಲ್ಲಾಹನ ಸೂಚನೆ ಅನುಸಾರ ಬಂದವನೆಂದು ಹೇಳಿರುವನು. ಮತ್ತು ಯಾರು ದೇವವಾಣಿ ಪಡೆಯುವ ಹಾಗೂ ಅಲ್ಲಾಹನ ವತಿಯಿಂದ ನಿಯುಕ್ತಿಗೊಳ್ಳುವ ದಾವೆ ಮಾಡಿರುವನು ಎಂದು ಪ್ರಶ್ನಿಸುವಾಗ ಉತ್ತರ ಮೌನವೆ ದೊರೆಯುತ್ತದೆ. ಇಂತಹ ಯಾವೊಬ್ಬ ವ್ಯಕ್ತಿಯನ್ನು ತೃಪ್ತಿಪಡಿಸಿರಲಿಲ್ಲ ಎಂದು ನೆನಪಿಡಬೇಕು. ಮಸೀಹ್ ಮೌಊದ್ ಆಗುವ ದಾವೆಯೂ ಅಲ್ಲಾಹನ ವಾಣಿ (ದೇವವಾಣಿ) ಪಡೆಯುವುದಕ್ಕಿಂತ ಮತ್ತು ಅಲ್ಲಾಹನಿಂದ ಮುಜದ್ದೀದ್ (ಧರ್ಮ ಸುಧಾರಕ) ನ ದಾವೆಗಿಂತ ದೊಡ್ಡದೇನಲ್ಲ ಎಂದು ಸ್ಪಷ್ಟವಾಗಿದೆ. ಯಾರಿಗೆ ಸ್ಥಾನಮಾನ ದೊರೆಯುತ್ತದೆ ಅವನು ದೇವವಾಣಿ ಪಡೆಯುವವನು, ಅವನು ಅಲ್ಲಾಹನಿಂದ ನಿಯುಕ್ತಿಗೊಳ್ಳುವನು. ಅವನು ಸಾದೃಶ್ಯ ಮಸೀಹನಾಗಲಿ, ಸಾದೃಶ್ಯ ಮೂಸಾ ಆಗಲಿ, ಇವೆಲ್ಲ ಹೆಸರುಗಳಿಗೆ ಅವನು ಅರ್ಹನಾಗಿರುವನು. ಸಾದೃಶ್ಯ ಆಗುವುದು ವಾಸ್ತವದಲ್ಲಿ ಅನುಗ್ರಹವಲ್ಲ. ಬದಲು ವಾಸ್ತವದ ಅನುಗ್ರಹವು ಅಲ್ಲಾಹನ ವಾಣಿ ಪಡೆಯುವುದರಲ್ಲಿ ಮತ್ತು ಅವನ ಸಂಬಂಧದಲ್ಲಾಗಿದೆ. ಅಂದ ಹಾಗೆ ಯಾವ ವ್ಯಕ್ತಿಗೆ ದೈವವಾಣಿ ಲಭಿಸಿದೆಯೋ ಅವನು ಅಲ್ಲಾಹನಿಂದ ನಿಯುಕ್ತಿಗೊಳ್ಳುವ ಅನುಗ್ರಹ ಪಡೆದಿರುವನಾಗುತ್ತಾನೆ. ಅಂದ ಹಾಗೆ ಅಲ್ಲಾಹನು ಕಾಲಕ್ಕನುಗುಣವಾಗಿ ಯಾವ ಹೆಸರಿನಿಂದಲೂ ಹೆಸರಿಸಬಹುದಾಗಿದೆ. ಹೆಸರನ್ನು ನೀಡುವುದು ಮಹಾ ಕಾರ್ಯವೇನಲ್ಲ. ಇಸ್ಲಾಮ್ ಧರ್ಮದಲ್ಲಿ ಮೂಸ, ಈಸಾ, ದಾವೂದ್, ಸುಲೈಮಾನ್, ಯಾಅಕೂಬ್ ಇತ್ಯಾದಿ ಹಲವು ನಬಿಗಳ ಹೆಸರುಗಳನ್ನು ಜನರು ಇಟ್ಟುಕೊಳ್ಳುತ್ತಾರೆ. ಈ ಹೆಸರುಗಳಿಂದ ಅವರ ಕರ್ಮಸಾಧ್ಯತೆ ಲಭಿಸುವಂತಾಗಲಿ ಎಂಬ ಸದುದ್ದೇಶದಿಂದ ಇಡುತ್ತಾರೆ. ಹೀಗಿರುವಾಗ ಅಲ್ಲಾಹನು ಯಾವುದೇ ಕಾರ್ಯಸಾಧ್ಯತೆಗಾಗಿ ತನ್ನ ವಾಣಿಯನ್ನು ದಯಪಾಲಿಸುತ್ತ ಯಾರದೋ ಸುಧಾರಣೆಗೆ ಕಾಲಕ್ಕನುಗುಣವಾಗಿ ತಕ್ಕದಾದ ಹೆಸರಿನಿಂದ ಕರೆಯುವುದರಲ್ಲಿ ತಪ್ಪೇನಿದೆ? (ಆಯಿನ ಕಮಾಲಾತೆ ಇಸ್ಲಾಂ, ರೂಹಾನಿ ಖಝಾಯಿನ್ ಸಂಪುಟ 5, ಪುಟ 340–341)

(3) ಮೂರನೇ ಚಿಹ್ನೆ: ಈ ವಿನೀತನು ಸತ್ಯವಾದಿಯಾಗಲು ಕಾರಣವೇನೆಂದರೆ ಹಲವು ಸಜ್ಜನರು ಪೂರ್ವ ಕಾಲದಿಂದಲೇ ನನ್ನ ಆಗಮನ ಕುರಿತು ಶುಭವಾರ್ತೆ ನೀಡಿರುವರು. ಎಲ್ಲಿಯವರೆಗೆ ಅಂದರೆ ನನ್ನ ಹೆಸರು, ವಾಸ ಮತ್ತು ವಯಸ್ಸು ಕುರಿತು ಉಲ್ಲೇಖಗಳು ದೊರೆಯುತ್ತವೆ. ಅದನ್ನು ನಾನು "ನಿಶಾನೆ ಆಸ್ಮಾನಿ: ಗ್ರಂಥದಲ್ಲಿ ಬರೆದಿರುತ್ತೇನೆ.

(4) ನಾಲ್ಕನೆ ಚಿಹ್ನೆ: ಈ ವಿನೀತನ ಸತ್ಯವಾದಿ ಆಗುವ ಕುರಿತು. ಈ ವಿನೀತನು ಹನ್ನೆರಡು ಸಾವಿರ ಸಮೀಪ ಪತ್ರಗಳು ಮತ್ತು ಜಾಹೀರಾತುಗಳನ್ನು "ದೇವವಾಣಿಯ ಅನುಗ್ರಹಗಳು ಸಾದಾರಪಡಿಸಲು ಪಂಥಹ್ವಾನ ನೀಡಿ ಇತರ ಧರ್ಮೀಯರಿಗೆ ಬರೆದಿರುವೆನು ವಿಶೇಷವಾಗಿ ಪಾದರಿಗಳಲ್ಲಿ ಬಹುಶಃ ಯೂರೋಪ್, ಅಮೇರಿಕಾ ಮತ್ತು ಭಾರತದಲ್ಲಿ ಒಬ್ಬನೇ ಒಬ್ಬ ಹೆಸರಾಂತ ಪಾದರಿಯನ್ನು ಬಿಡದೆ ನಾನು ರಿಜಿಸ್ಟರ್ ಮೂಲಕ ಪತ್ರ ಕಳುಹಿಸಿರುವೆನು. ಆದರೆ ಅವರೆಲ್ಲರ ಮೇಲೆ ಸತ್ಯದ ಪ್ರತಾಪ ಪ್ರಭಾವ ಬೀರಿದೆ. ನನ್ನ ಸಮುದಾಯದ ಮುಲ್ಲ ಮೌಲ್ವಿಗಳು ನನ್ನ ಈ ಕರೆಯ ಕುರಿತು ಟೀಕೆ ಟಿಪ್ಪಣಿ ಮಾಡುತ್ತಾರೆ. ಮಿಥ್ಯಾರೋಪ ದುರ್ವರ್ತನೆ ತೋರಿಸುತ್ತಿದ್ದಾರೆ. ನನಗೆ ಸ್ಪಷ್ಟರೂಪದಲ್ಲಿ ಶುಭವಾರ್ತೆ ನೀಡಲಾಗಿದೆ. ಯಾರಾದರೂ ನನ್ನ ವಿರೋಧಿ ನನ್ನ ಎದುರಿಗೆ ಪ್ರತಿಪಾದಿಸಲು ಬಂದರೆ ನಾನೇ ವಿಜಯಿಯಾಗುವೆನು. ಅವರು ಪರಾಜಿತರಾಗುವರು. ಅಂದ ಹಾಗೆ

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ನೀವು ಖಂಡಿತವಾಗಿಯೂ ಅಲ್ಲಾಹನ ಮತ್ತು ಅವನ ಸಂದೇಶವಾಹಕರನ್ನು ನಂಬುತ್ತೀರಿ ಮತ್ತು ನೀವು ನಮಾಝುನ್ನು ಅವಶ್ಯವಾಗಿ ನಿರ್ವಹಿಸುತ್ತೀರಿ ಮತ್ತು ಝಕಾತ್ ಅನ್ನು ಅವಶ್ಯವಾಗಿ ಪಾವತಿಸುತ್ತೀರಿ ಮತ್ತು ನೀವು ಅದರ ಮೇಲೆಯೇ ನಿಮ್ಮ ಪುತ್ರರು ಮತ್ತು ನಿಮ್ಮ ಹೆಂಡತಿಯರ ಪರವಾಗಿ ಬೈಅತ್ ಮಾಡುತ್ತೀರಿ.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರ‌ತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ನೀವು ನಿಮ್ಮ ಪ್ರತಿ ಕೆಲಸದಲ್ಲೂ ಅಲ್ಲಾಹನ ಭಯವಿರಿಸಿಕೊಳ್ಳಿ. ಇನ್ನಲ್ಲಾಹ ಮಅಲ್ಲದೀನತ್ತಖೌ ವಲ್ಲದೀನ ಹುಮ್ ಮುಹ್‌ಸಿನೂನ್.**

**ಖಿಲಾಫತೆ ಊಲದಲ್ಲಿ ಬಂಡಾಯಕೋರರ ಹಾಗೂ ಧರ್ಮಭ್ರಷ್ಟರ ವಿರುದ್ಧ ನಡೆಸಲಾದಂತಹ ಯೋಜನೆಗಳ ವಿವರಾತ್ಮಕ ಪ್ರಸ್ತಾವನೆ**

**ಸಿಯಾಲ್‌ಕೋಟಿನ ರಫೀಕ್ ಅಹ್ಮದ್ ಬಟ್ ಸಾಹಿಬ್‌ರ ಪತ್ನಿಯಾದ ಸಾಬಿರ ಬೇಗಂ ಸಾಹಿಬ ಮತ್ತು ಸನ್ಮಾನ್ಯ ರಶೀದ್ ಅಹ್ಮದ್ ಬಾಜ್‌ವ ಸಾಹಿಬ್‌ರ ಪತ್ನಿಯಾದ ಸುರಯ್ಯ ರಶೀದ್ ಸಾಹಿಬರವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **06–05–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರ‌ತ್ ಅಬೂಬಕರ್(ರ)ರ ಕುರಿತು ಹಿಂದಿನ ಖುತ್ಬಗಳಲ್ಲಿ ಪ್ರಸ್ತಾಪ ನಡೆಯುತ್ತಿತ್ತು. ಆ ಕಾಲದ ಸ್ಥಿತಿಗತಿಗಳು ಎಷ್ಟು ಕಠಿಣವಾಗಿತ್ತು ಎಂಬುದರ ಅಂದಾಜಾಗಲು ಯುದ್ಧ ಕಾರ್ಯಾಚರಣೆಗಾಗಿ ಕಳುಹಿಸುವುದರ ಬಗ್ಗೆ ಪ್ರಸ್ತಾಪಿಸುವೆನು. ಪ್ರಸ್ತಾಪಿಸಲಾದಂತೆ ಹನ್ನೊಂದು ಯುದ್ಧ ಸೈನ್ಯಗಳನ್ನು ಕಳುಹಿಸಲಾಗಿತ್ತು. ಅದರಲ್ಲಿ ಮೊದಲನೆಯದ್ದು ತುಲೈಹ ಬಿನ್ ಖುವೈಲಿದ್, ಮಾಲಿಕ ಬಿನ್ ನುವೈರ, ಸುಜಾಅ್ ಬಿನ್ತ್ ಹಾರಿಸ್ ಮತ್ತು ಮುಸೈಲಿಮ ಕದ್ದಾಬ್ ಮುಂತಾದ ದಂಗೆಗಾರರಾದ ಧರ್ಮತ್ಯಾಗಿಗಳು ಮತ್ತು ಸುಳ್ಳುಪ್ರವಾದಿಗಳನ್ನು ಕೊನೆಗೊಳಿಸಲು ಕಳುಹಿಸಲಾಗಿತ್ತು. ಹಝ್ರ‌ತ್ ಅಬೂಬಕರ್(ರ) ಒಂದು ಬಾವುಟವನ್ನು ಹಝ್ರ‌ತ್ ಖ಼ಾಲಿದ್ ಬಿನ್ ವಲೀದ್‌ರಿಗೆ ಒಪ್ಪಿಸಿದರು. ತುಲೈಹ ಬಿನ್ ಖುವೈಲಿದ್‌ರನ್ನು ಎದುರಿಸಲು ಹೋಗಲು ಅವರನ್ನು ಆದೇಶಿಸಿದರು. ಅನಂತರ ಬುತಾಅ್‌ಗೆ ಹೋಗಿ ಮಾಲಿಕ್ ಬಿನ್ ನುವೈರರೊಂದಿಗೆ ಯುದ್ಧ ಮಾಡಲು ಹೇಳಲಾಯಿತು. ಎಂದರೆ, ಅವರು ಯುದ್ಧ ಮಾಡುವುದಕ್ಕೆ ಮುಂದಾದರೆ ಮಾತ್ರ ಅವರ ವಿರುದ್ಧ ಯುದ್ಧ ಮಾಡಬೇಕೆಂದು ಹೇಳಲಾಯಿತು. ಬುತಾಅ್ ಎಂಬುದು ಬನು ಅಸದರ ಪ್ರದೇಶದ ಒಂದು ಚಲುಮೆಯ ಹೆಸರಾಗಿದೆ ಅಲ್ಲಿ ಈ ಯುದ್ಧ ನಡೆಯಿತು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–257, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012) (ಮುಜಮುಲ್ ಬಲದಾನ್, ಸಂಪುಟ–1, ಪುಟ–527)

ಹಝ್ರ‌ತ್ ಸಾಬಿತ್ ಬಿನ್ ಖೈಸ್‌ರನ್ನು ಅನ್ಸಾರರ ನೇತಾರರನ್ನಾಗಿ ಹಝ್ರ‌ತ್ ಅಬೂಬಕರ್(ರ) ನಿಶ್ಚಯಿಸಿದರು ಎಂದು ಒಂದು ವರದಿಯಿದೆ. ಅವರನ್ನು ಹಝ್ರ‌ತ್ ಖ಼ಾಲಿದ್ ಬಿನ್ ವಲೀದ್‌ರ ಅಧೀನದಲ್ಲಿ ಮಾಡಿಕೊಂಡು ತುಲೈಹ ಮತ್ತು ಉಯೈನ ಬಿನ್ ಹಿಸ್‌ನ್‌ರನ್ನು ಎದುರಿಸಲು ಹೋಗಬೇಕೆಂದು ಹಝ್ರ‌ತ್ ಖ಼ಾಲಿದ್‌ರಿಗೆ ಆದೇಶ ಕೊಟ್ಟರು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–260, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012)

ಧರ್ಮತ್ಯಾಗಿಗಳ ವಿರುದ್ಧ ಯುದ್ಧ ನಡೆಸಲಿಕ್ಕಾಗಿ ಖ಼ಾಲಿದ್ ಬಿನ್ ವಲೀದ್‌ರಿಗೆ ಬಾವುಟವನ್ನು ಕಟ್ಟುತ್ತಿದ್ದಾಗ ಹಝ್ರ‌ತ್ ಅಬೂಬಕರ್(ರ) ಹೇಳಿದರು: ಖ಼ಾಲಿದ್ ಬಿನ್ ವಲೀದ್ ಅಲ್ಲಾಹನ ಅತ್ಯುತ್ತಮ ದಾಸನೆಂದೂ ನಮ್ಮ ಸಹೋದರನೆಂದೂ ಸತ್ಯನಿಷೇಧಿಗಳ ಮತ್ತು ಕಪಟವಿಶ್ವಾಸಿಗಳ ವಿರುದ್ಧ ಎತ್ತಲಾದ ಅಲ್ಲಾಹನ ಖಡ್ಗಗಳಲ್ಲಿ ಒಂದು ಖಡ್ಗವೆಂದೂ ಹಝ್ರ‌ತ್ ಪೈಗಂಬರ್(ಸ) ಹೇಳಿದ್ದಾಗಿ ನಾನು ಆಲಿಸಿದ್ದೇನೆ. (ಅಲ್‌ಬದಾಯ ವನ್ನಹಾಯ, ಸಂಪುಟ–3, ಪುಟ–313, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2001)

ಹಝ್ರ‌ತ್ ಖ಼ಾಲಿದ್ ಬಿನ್ ವಲೀದ್‌ರನ್ನು ಹಝ್ರ‌ತ್ ಅಬೂಬಕರ್(ರ) ತುಲೈಹ ಮತ್ತು ಉಯೈನನ ಕಡೆಗೆ ಕಳುಹಿಸಿದರು. ಈ ಈರ್ವರೂ ಶತ್ರುಗಳ ಸಂಕ್ಷೇಪವಾದ ಪರಿಚಯವನ್ನು ಮುಂದಿರಿಸುತ್ತೇನೆ.

ತುಲೈಹ ಅಸದಿ ಎಂಬವನು ಸುಳ್ಳುಪ್ರವಾದಿಗಳಲ್ಲಿ ಒಬ್ಬನಾಗಿದ್ದನು. ಅವನು ಹಝ್ರ‌ತ್ ಪೈಗಂಬರ್(ಸ)ರ ಪರಿಶುದ್ಧ ಜೀವಿತದ ಕೊನೆಯ ಕಾಲದಲ್ಲಿ ಮುಂದೆ ಬಂದಿದ್ದನು. ಅವನ ಹೆಸರು ತುಲೈಹ ಬಿನ್ ಖುವೈಲಿದ್ ಬಿನ್ ನೌಫಲ್ ಬಿನ್ ನಝ್ಲ ಅಸದಿ ಎಂದಾಗಿತ್ತು. ಹಿಜರೀ 9ರಲ್ಲಿ ತನ್ನ ಗೋತ್ರವಾದ ಬನೂ ಅಸದಿನೊಂದಿಗೆ ಹಝ್ರ‌ತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದನು. ಮದೀನಕ್ಕೆ ಬಂದು ಹಝ್ರ‌ತ್ ಪೈಗಂಬರ್(ಸ)ರೊಡನೆ ಸಲಾಂ ಹೇಳಿದನು. ಔದಾರ್ಯ ಮಾಡುವ ರೀತಿಯಲ್ಲಿ ಆ ಗೋತ್ರದವರು ಹೇಳಿದರು: ನಾವು ನಿಮ್ಮ ಸನ್ನಿಧಿಯಲ್ಲಿ ಹಾಜರಾಗಿದ್ದೇವೆ. ಅಲ್ಲಾಹನಲ್ಲದೇ ಬೇರೆ ಆರಾಧ್ಯನಿಲ್ಲವೆಂದೂ ನೀವು ಅಲ್ಲಾಹನ ದಾಸ ಮತ್ತು ದೂತರೆಂದೂ ನಾವು ಸಾಕ್ಷ್ಯವಹಿಸುತ್ತೇವೆ. ಆದರೆ ನೀವು ನಮ್ಮ ಬಳಿಗೆ ಯಾರನ್ನೂ ಕಳುಹಿಸಲಿಲ್ಲ. ಈ ಜನರು ಮರಳಿ ಹೋದ ನಂತರ ಹಝ್ರ‌ತ್ ಪೈಗಂಬರ್(ಸ)ರ ಜೀವಿತಕಾಲದಲ್ಲೇ ತುಲೈಹ ಧರ್ಮತ್ಯಾಗ ಮಾಡಿದನು ಮತ್ತು ಸುಳ್ಳುಪ್ರವಾದಿತ್ವ ವಾದವನ್ನು ಮಾಡಿದನು. ಸಮೀರ ಎಂಬ ಪ್ರದೇಶವನ್ನು ತನ್ನ ಸೇನಾ ಕೇಂದ್ರವನ್ನಾಗಿ ಮಾಡಿದನು. ಆದ್ ಸಮುದಾಯದ ಒಬ್ಬ ವ್ಯಕ್ತಿಯ ಹೆಸರಲ್ಲಿ ಈ ಪ್ರದೇಶಕ್ಕೆ ಸಮೀರ ಎಂದು ಹೆಸರಿಡಲಾಗಿತ್ತು. ಮದೀನ ಮತ್ತು ಮಕ್ಕದ ನಡುವೆ ಈ ಪ್ರದೇಶವಿದೆ. ಈ ಪ್ರದೇಶದ ಸುತ್ತಮುತ್ತ ಕಪ್ಪು ಪರ್ವತಗಳಿವೆ. ಆದ್ದರಿಂದ ಇದಕ್ಕೆ ಸಮೀರ ಎಂದು ಹೆಸರಿಡಲಾಯಿತು ಎಂದೂ ಇದೆ. ಹೇಗಿದ್ದರೂ ಇವನು ವಾದಿಸಿದಾಗ ಜನಸಾಮಾನ್ಯರು ಅವನಿಗೆ ವಿಧೇಯರಾದರು. ಜನರು ದಾರಿ ತಪ್ಪಲು ದೊಡ್ಡದಾದ ಕಾರಣವೇನೆಂದರೆ, ಇವನು ತನ್ನ ಸಮುದಾಯದೊಂದಿಗೆ ಒಂದು ಯಾತ್ರೆಯಲ್ಲಿದ್ದನು. ನೀರು ಮುಗಿದು ಹೋಯಿತು. ಜನರಿಗೆ ಕಠಿಣವಾದ ಬಾಯಾರಿಕೆಯಾಯಿತು. ಅವನು ಅವರೊಡನೆ ಹೇಳಿದನು: ನೀವು ನನ್ನ ಕುದುರೆಯಾದ ಅಅ್‌ಲಾಲಿನಲ್ಲಿ ಸವಾರರಾಗಿಕೊಂಡು ಕೆಲವು ಮೈಲುಗಳಷ್ಟು ದೂರಕ್ಕೆ ಹೋಗಿರಿ. ಅಲ್ಲಿ ನಿಮಗೆ ನೀರು ಸಿಗುವುದು. ಅವರು ಹಾಗೆಯೇ ಮಾಡಿದರು ಮತ್ತು ಅವರಿಗೆ ನೀರು ಲಭಿಸಿತು. ಈ ಗ್ರಾಮವಾಸಿಗಳು ಈ ಫಿತ್ನದಲ್ಲಿ ಬಿದ್ದುಬಿಟ್ಟರು. ಮೊದಲೇ ನೀರಿನ ಸ್ಥಳವನ್ನು ಅವನು ನೋಡಿರಬಹುದು. ಬಹಳ ಚಾಣಾಕ್ಷತೆಯಿಂದ ಅವನು ಅವರನ್ನು ಅಲ್ಲಿಗೆ ಕಳುಹಿಸಿದರು. ಅವಿದ್ಯಾವಂತರಾದ ಈ ಗ್ರಾಮವಾಸಿಗಳು ಇದಕ್ಕೆ ಬಲಿಯಾದರು. ಹೇಗಿದ್ದರೂ ಅವನ ಅಸತ್ಯದ ಮಾತುಗಳಲ್ಲಿ ಒಂದು ಏನೆಂದರೆ, ಅವನು ನಮಾಝಿನಂದ ಸಜದವನ್ನು ಕೊನೆಗೊಳಿಸಿದನು. ನಮಾಝಿನಲ್ಲಿ ಸಜದದ ಆವಶ್ಯಕತೆಯಿಲ್ಲವೆಂದು ಹೇಳಿಕೊಳ್ಳುತ್ತಿದ್ದನು. ಆಕಾಶದಿಂದ ಅವನಗೆ ದಿವ್ಯವಾಣಿ ಅವತೀರ್ಣವಾಗುತ್ತದೆ ಎಂದು ಅವನು ಹೇಳುತ್ತಿದ್ದನು. ಅದನ್ನು ಕಾವ್ಯಾತ್ಮಕ ಸಾಲುಗಳಲ್ಲಿ ದಿವ್ಯವಾಣಿಗಳು ಎಂದು ಹೇಳಿ ಮುಂದಿರಿಸುತ್ತಿದ್ದನು.

ಇಸ್ಲಾಮಿಗೆ ಮುಂಚೆ ಕಣಿ ಹೇಳುವವರು ಕಾವ್ಯಾತ್ಮಕ ಸಾಲುಗಳಲ್ಲಿ ವಾಕ್ಯಗಳನ್ನು ಹೇಳಿ ಜನರೊಳಗೆ ಅವರ ಕುರಿತು ಒಂದು ಆದರಭಾವ ಉಂಟುಮಾಡಿಸುತ್ತಿದ್ದರು. ತುಲೈಹ ಕೂಡ ಕಣಿ ಹೇಳುವವನಾಗಿದ್ದನು. ತುಲೈಹ ಅಸದಿಯ ಆತ್ಮವು ಅವನನ್ನು ಮೋಸಗೊಳಿಸಿತು. ಅವನ ವಿಷಯ ಶಕ್ತಗೊಂಡಿತು. ಅವನ ವಾದ ಬಲಗೊಂಡಿತು. ಹಝ್ರತ್ ಪೈಗಂಬರ್(ಸ)ರಿಗೆ ಈ ವಿಷಯದ ಸುದ್ದಿ ಮುಟ್ಟಿದಾಗ ಅವರು ಝಿರಾರ್ ಬಿನ್ ಆಝ್ವಾರ್ ಅಸದಿಯನ್ನು ಅವನ ವಿರುದ್ಧ ಯುದ್ಧ ಮಾಡಲು ಕಳುಹಿಸಿದರು. ಆದರೆ ಝಿರಾರನಿಗೆ ಅವನನ್ನು ಎದುರಿಸಲು ಸಾಧ್ಯವಾಗಲಿಲ್ಲ. ಏಕೆಂದರೆ ಸಮಯ ಕಳೆದಂತೆ ಅವನ ಶಕ್ತಿ ವರ್ಧಿಸಿತ್ತು. ವಿಶೇಷವಾಗಿ ಸಹಾಯಕ ಗೋತ್ರಗಳಾದ ಅಸದ್ ಮತ್ತು ಘತ್ಕಾನ್ ಇವನನ್ನು ನಂಬಿದ್ದ ಕಾರಣದಿಂದ ಅವನ ಶಕ್ತಿ ಇನ್ನಷ್ಟು ವರ್ಧಿಸಿತ್ತು. ಹಝ್ರತ್ ಪೈಗಂಬರ್(ಸ) ನಿಧನರಾದರು. ಆದರೆ ತುಲೈಹನ ಸಮಸ್ಯೆ ಬಗೆಹರಿಯಲಿಲ್ಲ. ಖಿಲಾಫತ್ ಸ್ಥಾನವು ಹಝ್ರತ್ ಅಬೂಬಕರ್(ರ)ರಿಗೆ ಲಭಿಸಿತು. ದಂಗೆಗಾರರಾದ ಧರ್ಮತ್ಯಾಗಿಗಳನ್ನು ಕೊನೆಗೊಳಿಸಲು ಅವರು ಸೈನ್ಯವನ್ನು ತಯಾರು ಮಾಡಿದರು ಮತ್ತು ನೇತಾರರನ್ನು ನಿಶ್ಚಯಿಸಿದರು. ತುಲೈಹ ಅಸದಿಯ ಕಡೆಗೆ ಹಝ್ರತ್ ಖಾಲಿದ್ ಬಿನ್ ವಲೀದ್(ರ)ರನ್ನು ಸೇನಾಧಿಪತಿಯನ್ನಾಗಿ ಮಾಡಿಕೊಂಡು ಹಝ್ರತ್ ಅಬೂಬಕರ್(ರ) ಸೈನ್ಯವನ್ನು ಕಳುಹಿಸಿದರು. (ಸಯ್ಯದುನಾ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಡಾ॥ ಅಲೀ ಮುಹಮ್ಮದ್ ಸಲಾಬಿ ಅನುವಾದ, ಪುಟ–316–318, ಅಲ್‌ಫುರ್ಖಾನ್ ಮುಝಫ್ಫರ್‌ಗಡ್ ಪಾಕಿಸ್ತಾನ) (ಅಸದುಲ್‌ಗಾಬ, ಭಾಗ–3, ಪುಟ–94, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2016) (ಮುಜಮುಲ್ ಬಲದಾನ್, ಸಂಪುಟ–3, ಪುಟ–290)

ಇವರು ಕೇವಲ ಧರ್ಮತ್ಯಾಗಿಗಳೋ ನುಬುವ್ವತ್ ವಾದಿಗಳೋ ಆಗಿರಲಿಲ್ಲ. ಬದಲಾಗಿ ಮುಸ್ಲಿಮರ ವಿರುದ್ಧ ಯುದ್ಧಗಳನ್ನು ಮಾಡುತ್ತಿದ್ದರು. ಅವರಿಗೆ ನಷ್ಟ ಉಂಟುಮಾಡಲು ಶ್ರಮಿಸುತ್ತಿದ್ದರು.

ಉಯೈನ ಹಿಸ್ನ್ ಯಾರು ಎಂಬುದರ ಬಗ್ಗೆ ಹೀಗೆ ಬರೆಯಲಾಗಿದೆ: ಉಯೈನ ಎಂಬವನು ಅಹ್‌ಝಾಬ್ ಯುದ್ಧದ ಸಂದರ್ಭದಲ್ಲಿ ಬನೂ ಫಝಾರದ ಸರದಾರನಾಗಿದ್ದನು. ಈ ಯುದ್ಧದ ವೇಳೆ ಸತ್ಯನಿಷೇಧಿಗಳ ಮೂರು ಸೈನ್ಯಗಳು ಬನೀಖುರೈಝದೊಂದಿಗೆ ಸೇರಿಕೊಂಡು ಮದೀನದ ಮೇಲೆ ಪ್ರಚಂಡವಾದ ದಾಳಿ ನಡೆಸಲು ಉದ್ದೇಶಿದ್ದುವು. ಅವುಗಳಲ್ಲಿ ಒಂದು ಸೈನ್ಯದ ಸರದಾರ ಉಯೈನ ಆಗಿದ್ದನು. ಅಹ್‌ಝಾಬ್ ಯುದ್ಧದಲ್ಲಿ ಸತ್ಯನಿಷೇಧಿಗಳು ಪರಾಜಿತಗೊಂಡ ನಂತರವೂ ಅವನು ಮದೀನದ ಮೇಲೆ ದಾಳಿ ನಡೆಸಲು ಉದ್ದೇಶಿಸಿದ್ದನು. ಆದರೆ ಹಝ್ರತ್ ಪೈಗಂಬರ್(ಸ) ಪಟ್ಟಣದಿಂದ ಹೊರಗೆ ಬಂದು ಅವನ ದಾಳಿಯನ್ನು ತಡೆದರು. ಅವನನ್ನು ಹಿಂತಿರುಗಿ ಹೋಗುವಂತೆ ಮಾಡಿದರು. ಈ ಯುದ್ಧವನ್ನು ದೀಖರದ್ ಯುದ್ಧವೆಂದು ಕರೆಯಲಾಗುತ್ತದೆ. (ಸಯ್ಯದುನಾ ಹಝ್ರತ್ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್ ಅನುವಾದ, ಪುಟ–139, ಶಿರ್ಕತ್ ಪ್ರಂಟಿಂಗ್ ಪ್ರೆಸ್ ಲಾಹೋರ್)

ಉಯೈನ ಬಿನ್ ಹಿಸ್ನ್ ಮಕ್ಕಾ ವಿಜಯಕ್ಕೆ ಮುಂಚಿತವಾಗಿ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದನು. ಮಕ್ಕಾ ವಿಜಯದಲ್ಲಿ ಭಾಗಿಯಾಗಿದ್ದನು. ಹುನೈನ್ ಮತ್ತು ತಾಯಿಫ್ ಯುದ್ಧದಲ್ಲೂ ಇವನು ಭಾಗವಹಿಸಿದ್ದನು. ಹಝ್ರತ್ ಪೈಗಂಬರ್(ಸ) ಹಿಜರೀ 9ರಲ್ಲಿ ಅವನನ್ನು ಬನೂ ತಮೀಮ್‌ರನ್ನು ಪರಾಜಿತಗೊಳಿಸಲಿಕ್ಕಾಗಿ 50 ಸವಾರಿಗಳ ಜೊತೆಗೆ ಕಳುಹಿಸಿದ್ದರು. ಅದರಲ್ಲಿ ಅನ್ಸಾರ್ ಮತ್ತು ಮುಹಾಜಿರ್ ಸಹಾಬಿಯರಾದ ಯಾರೂ ಇರಲಿಲ್ಲ. ಈ ಯುದ್ಧದ ಕಾರಣವೇನಾಗಿತ್ತು ಎಂದರೆ, ಹಝ್ರತ್ ಪೈಗಂಬರ್(ಸ) ಸದಖಗಳನ್ನು ವಸೂಲು ಮಾಡಲು ಕಳುಹಿಸಿದ ಅಧಿಕಾರಿಯನ್ನು ಬನೂ ತಮೀಂ ಗೋತ್ರದವರು ತಡೆದರು. ಅನಂತರ ಹಝ್ರತ್ ಅಬೂಬಕರ್(ರ)ರ ಖಿಲಾಫತ್ ಕಾಲದಲ್ಲಿ ಉಯೈನ ಧರ್ಮತ್ಯಾಗಿಗಳಾದ ದಂಗೆಗಾರರ ಜೊತೆಗೆ ಧರ್ಮತ್ಯಾಗದ ಪಿತೂರಿಯಲ್ಲಿ ಸಿಲುಕಿಕೊಂಡನು ಮತ್ತು ತುಲೈಹರ ಕಡೆಗೆ ವಾಲಿಕೊಂಡನು. ಅವನನ್ನು ಬೈಅತ್ ಮಾಡಿದನು. ಹೇಗಿದ್ದರೂ ಅನಂತರ ಅವನು ಇಸ್ಲಾಮಿನ ಕಡೆಗೆ ಮರಳಿ ಬಂದಿದ್ದನು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಭಾಗ–4, ಪುಟ–639, ದಾರುಲ್ ಕುತುಬ್ ಇಲ್‌ಮಿಯ ಬೈರೂಥ್ 2005) (ಝಿಯಾ ಉನ್ನಬಿ(ಸ), ಪೀರ್ ಮುಹಮ್ಮದ್ ಅಕ್ರಮ್ ಶಾಹುಲ್ ಅಝ್‌ಹರಿ, ಸಂಪುಟ–4, ಪುಟ–566–567, ತಖ್ಲೀಖ್ ಮರ್ಕಝ್ ಪ್ರಂಟರ್ಸ್ ಲಾಹೋರ್ 1420ಹಿ)

ಈ ಜನರು ಮೊದಲು ಇಸ್ಲಾಮ್ ವಿರುದ್ಧ ಹೋರಾಡುತ್ತಿದ್ದರು. ನಂತರ ಅವರು ಮುಸ್ಲಿಮರಾದರು ಮತ್ತು ನಂತರ ಯುದ್ಧ ಆರಂಭಿಸಿದರು. ಅಬಸ್, ಧುಬ್‌ಯಾನ್ ಮತ್ತು ಅವರ ಸಹಾಯಕರು ಬುಝಾಖ ಎಂಬ ಪ್ರದೇಶದಲ್ಲಿ ಒಟ್ಟುಗೂಡಿದಾಗ, ತೈ ಗೋತ್ರದ ಎರಡು ಶಾಖೆಗಳಾದ ಬನೂ ಹದೀಲ ಮತ್ತು ಗೋಸ್ ಗೋತ್ರದವರೊಡನೆ ಬೇಗನೇ ತನ್ನ ಬಳಿಗೆ ಬರಲು ತುಲೈಹ ಹೇಳಿದನು. ಹೀಗೆ ಅವರು ಬಂದರು. ಖಾಲಿದ್ ಬಿನ್ ವಲೀದ್‌ರನ್ನು ಧುಲ್‌ಖಸ್ಸದಿಂದ ಕಳುಹಿಸುವುದಕ್ಕೆ ಮುಂಚಿತವಾಗಿ ಹಝ್ರತ್ ಅಬೂಬಕರ್(ರ) ಹಝ್ರತ್ ಅದಿ(ರ)ರೊಡನೆ ಹೇಳಿದರು: ನೀವು ನಿಮ್ಮ ಸಮುದಾಯವಾದ ತೈ ಗೋತ್ರದ ಬಳಿಗೆ ಹೋಗಿರಿ. ಅವರು ನಾಶವಾಗುವಂತೆ ಆಗದಿರಲಿ. ಹಝ್ರತ್ ಅದಿ(ರ) ತನ್ನ ಗೋತ್ರದವರ ಬಳಿಗೆ ಬಂದು ಅವರಿಗೆ ಇಸ್ಲಾಮಿನ ಸಂದೇಶವನ್ನು ನೀಡಿದರು. ಅವರೊಳಗೆ ಭಯ ಹುಟ್ಟಿಸಿದರು. ಝುರ್‌ವಹ್ ಎಂಬುದು ಸಹ ಗತ್‌ಫಾನರ ಪ್ರದೇಶದ ಒಂದು ಸ್ಥಳವಾಗಿದೆ. ಮತ್ತು ಬನೂ ಮುರ್‍ರದಲ್ಲಿ ಬಿನ್ ಔಫರ ಓಂದು ಚೆಲುಮೆಯ ಹೆಸರಾಗಿದೆ ಎಂದು ಸಹ ಹೇಳಲಾಗಿದೆ. ಏನೇ ಇರಲಿ ಹಝ್‌ರತ್ ಖಾಲಿದ್(ರ) ಅವರನ್ನು ಹಿಂಬಾಲಿಸಿದರು. ಹಝ್‌ರತ್ ಅಬುಬಕರ್(ರ) ಅವರಿಗೆ ಮೊದಲು ತೈ ಗೋತ್ರದ ಕಡೆಯಿಂದ ದಂಡಯಾತ್ರೆಯನ್ನು ಪ್ರಾರಂಭಿಸಲು ಆಜ್ಞಾಪಿಸಿದರು ಮತ್ತು ನಂತರ ಬುಝಾಖಾ ಕಡೆಗೆ ತಿರುಗಿ ಅಲ್ಲಿಂದ ಅಂತಿಮವಾಗಿ ಬುತಾಹ್ ಹೋಗಲು ಆಜ್ಞಾಲಿಸಿದರು ಹೀಗೆ ಅವರು ವೈರಿಗಳ ಮೇಲೆ ವಿಜಯ ಸಾಧಿಸಿದಾಗ ಅವರು ಹೋಸ ಆದೇಶಗಳನ್ನು ಪಡೆಯುವವರೆಗೆ ಅವರು ಎಲ್ಲಿಯೂ ಆಕ್ರಮಣ ಮಾಡಲು ಪ್ರಯತ್ನಿಸಬಾರದು.

ಸ್ವತಃ ಖೈಬರ್‌ಗೆ ಹೋಗುತ್ತಿದ್ದೇನೆ ಎಂದು ಹಝ್‌ರತ್ ಅಬೂಬಕರ್(ರ) ಅವರು ವ್ಯಕ್ತಪಡಿಸಿದ್ದಾರೆ. ಹಝ್‌ರತ್ ಅಬೂಬಕರ್(ರ) ಸ್ವತಃ ಖೈಬರ್‌ಗೆ ಹೋಗುತ್ತಿದ್ದಾರೆ ಮತ್ತು ಅಲ್ಲಿಂದ ಹಿಂದಿರುಗಿದ ನಂತರ ಅವರು ಸಲ್ಮಾ ಪರ್ವತದ ಇಳಿಜಾರಿನಲ್ಲಿ ಖಾಲಿದ್ ಅವರನ್ನು ಭೇಟಿಯಾಗುತ್ತಾರೆ ಎಂದು ಜನರಲ್ಲಿ ಪ್ರಸಿದ್ಧವಾಯಿತು. ಮತ್ತೊಂದು ವರದಿಯ ಪ್ರಕಾರ, ಹಝ್‌ರತ್ ಅಬೂಬಕರ್(ರ) ಅವರು ಈ ಸುದ್ದಿಯನ್ನು ಶತ್ರುಗಳಿಗೆ ತಲುಪಿದಾಗ ಅವರು ಹಝ್‌ರತ್ ಖಾಲಿದ್ ಅವರೊಂದಿಗೆ ಎಲ್ಲಾ ಸೈನ್ಯವನ್ನು ಕಳುಹಿಸಿದ್ದರೂ ಮತ್ತೊಂದು ಸೈನ್ಯವಿದೆ ಎಂದು ಅವರು ಭಯಪಡುತ್ತಾರೆ ಎಂದು ಈ ಯೋಜನೆಯನ್ನು ಮಾಡಿದರು. ಹಝ್‌ರತ್ ಖಾಲಿದ್ ಹೋದರು. ಬುಝಾಖಾದಿಂದ ಅವರು ಅಜಾ ಕಡೆಗೆ ತಿರುಗಿದರು. ಅಜಾ ಮತ್ತು ಸಲ್ಮಾ ಇವು ಎರಡು ಪರ್ವತಗಳಾಗಿವೆ. ಸಲ್ಮಾವಿನ ಬಗ್ಗೆ ಮೊದಲು ಪ್ರಸ್ತಾಪಿಸಲಾಗಿದೆ ಅದು ಸಮೀರಾದ ಎಡಭಾಗದಲ್ಲಿದೆ. ಮತ್ತೊಂದು ವರದಿಯ ಪ್ರಕಾರ ಅಜಾ ಬಾನು ತೈ ಅವರ ಪರ್ವತವಾಗಿದೆ.

ಏನೇ ಇರಲಿ ಹಝ್‌ರತ್ ಖಾಲಿದ್(ರ) ಅವರು ಖೈಬರ್‌ಗೆ ಹೋಗುವುದಾಗಿ ಮತ್ತು ಅಲ್ಲಿಂದ ತೈಗೆ ಹಿಂತಿರುಗುವುದಾಗಿ ಸೂಚಿಸಿದರು. ಈ ತಂತ್ರದಿಂದಾಗಿ, ತೈ ಗೋತ್ರದ ಜನರು ತಮ್ಮ ಸ್ಥಳದಲ್ಲಿ ಉಳಿದರು ಮತ್ತು ತುಲೈಹಾಗೆ ಹೋಗುವುದನ್ನು ನಿಲ್ಲಿಸಿದರು. ಹಝ್‌ರತ್ ಅದಿ(ರ) ಕೂಡ ತೈ ಬಳಿ ಬಂದು ಇಸ್ಲಾಮ್ ಧರ್ಮಕ್ಕೆ ಅಹ್ವಾನಿಸಿದರು. ಅದಕ್ಕೆ ಅವರು ಅಬುಲ್ ಫಸೀಲ್ ಅನ್ನು ಎಂದಿಗೂ ಅನುಸರಿಸುವುದಿಲ್ಲ ಎಂದು ಹೇಳಿದರು. ಅಬುಲ್ ಫಸೀಲ್ ಎಂದರೆ ಹಝ್‌ರತ್ ಅಬುಬಕರ್ ಎಂದರ್ಥ. ಫಸೀಲ್ ಎಂದರೆ ಒಂಟೆ ಅಥವಾ ಗೋವಿನಿಂದ ಕಳೆದುಹೋಗಿರುವ ಕರು ಅಥವಾ ಹಾಲುಣಿಸುವುದನ್ನು ನಿಲ್ಲಿಸಿರುವ ಕರುವನ್ನು ಹೇಳಲಾಗುತ್ತದೆ. ಆದ್ದರಿಂದ ಜನರು ಅವರನ್ನು ಕೀಳಾಗಿ ಅಬುಲ್ಫಸೀಲ್ ಅಂದರೆ ಒಂಟೆಯ ತಂದೆ ಎಂದು ಹೇಳುತ್ತಿದ್ದರು. ಹಝ್‌ರತ್ ಅದಿ(ರ) ಹೇಳಿದರು ನಿಮ್ಮ ಮೇಲೆ ಕರುಣೆ ತೋರದ ಒಂದು ದೊಡ್ಡ ಸೈನ್ಯವು ನಿಮ್ಮ ಕಡೆಗೆ ಬರುತ್ತಿದೆ ಮತ್ತು ಯಾರಿಗೂ ಶಾಂತಿ ಸಿಗದ ರೀತಿಯಲ್ಲಿ ಹತ್ಯೆಯ ಮಾರುಕಟ್ಟೆಯನ್ನು ಬಿಸಿ ಮಾಡುತ್ತದೆ. ಹೀಗೆ ನಾನು ನಿಮಗೆ ತಿಳಿ ಹೇಳಿದ್ದೇನೆ ಮುಂದೆ ನಿಮ್ಮ ಕೆಲಸವಾಗಿದೆ.

ಮತ್ತೊಂದು ವರದಿಯ ಪ್ರಕಾರ, ಅವರು ತಮ್ಮ ಗೋತ್ರದ ಜನರಿಗೆ ಆ ಸಮಯದಲ್ಲಿ ಹಝ್‌ರತ್ ಅಬುಬಕರ್(ರ) ಅವರನ್ನು ಫಹ್ಲ್–ಉಲ್–ಅಕ್ಬರ್ ಎಂಬ ಉಪನಾಮದಿಂದ ನೆನಪಿಸಿಕೊಳ್ಳುತ್ತಾರೆ ಎಂದು ಹೇಳಿದರು. ಫಹ್ಲ್ ಅನ್ನು ಪ್ರತಿ ಪ್ರಾಣಿಯ ಗಂಡು ತಳಿಗೆ ಕರೆಯಲಾಗುತ್ತದೆ, ಅಂದರೆ, ಈಗ ನೀವು ಅವುಗಳನ್ನು ಚಿಕ್ಕ ಮರಿ ಒಂಟೆಗಳು ಎಂದು ಅಪಹಾಸ್ಯದಿಂದ ಮತ್ತು ತಿರಸ್ಕಾರದಿಂದ ಕರೆಯುತ್ತಿದ್ದೀರಿ, ನಂತರ ನೀವು ಅವುಗಳನ್ನು ಬಲವಾದ ಗಂಡು ಒಂಟೆಗಳು ಎಂದು ಕರೆಯುವಿರಿ. ಅವರ ಮಾತುಗಳನ್ನು ಕೇಳಿದ ತೈ ಗೋತ್ರದ ಜನರು, “ನೀವು ಹೋಗಿ ಈ ಆಕ್ರಮಣಕಾರಿ ಸೈನ್ಯವನ್ನು ಭೇಟಿಯಾಗಿ ಅವರನ್ನು ನಮ್ಮ ಮೇಲೆ ಅಕ್ರಮಣ ಮಾಡುವುದರಿಂದ ತಡೆಯಿರಿ” ಎಂದು ಹೇಳಿದರು. ನಮ್ಮ ಜನರು ತುಲೈಹನ ನಿಯಂತ್ರಣದಲ್ಲಿದ್ದಾಗ ನಾವು ತುಲೈಹ ಅವರನ್ನು ವಿರೋಧಿಸಿದರೆ ಅವರು ಅವರೆಲ್ಲರನ್ನು ಕೊಂದುಬಿಡುತ್ತಾನೆ ಅಥವಾ ಒತ್ತೆಯಾಳಾಗಿ ತೆಗೆದುಕೊಳ್ಳುತ್ತಾನೆ ಎಂದು ನಾವು ಭಯಪಡುತ್ತೇವೆ. ಅವನು ತನ್ನ ವಿರೋಧಿಗಳನ್ನು ಎಂದಿಗೂ ಬಿಡುವುದಿಲ್ಲ ಎಂಬುದು ಎಲ್ಲರಿಗೂ ತಿಳಿದಿತ್ತು, ಮತ್ತು ತೈ ಗೋತ್ರದ ಜನರು ಸಹ ಹೇಳಿದರು ನಮ್ಮ ಜನರು ಅಲ್ಲಿ ಇರುವುದರಿಂದ ನಾವು

ಬಂದರೆ ಅಥವಾ ಇವರು ಮುಸ್ಲಿಮರಾಗುತ್ತಾರೆ ಎಂದು ಅವನಿಗೆ ಸ್ಪಷ್ಟವಾಗಿ ತಿಳಿದರೆ ಅವನು ಕೊಲ್ಲುತ್ತಾನೆ ಎಂದು ಹೇಳಿದರು.

ಹಝ್ರತ್ ಅದಿ(ರ) ಅವರು ಹಝ್ರತ್ ಖಾಲಿದ್(ರ) ಅವರನ್ನು ಸುನಹ್ ಎಂಬ ಸ್ಥಳದಲ್ಲಿ ಸ್ವಾಗತಿಸಿದರು. ಸುನಹ್ ಕೂಡ ಮದೀನಾದ ಹೊರವಲಯದಲ್ಲಿರುವ ಒಂದು ಸ್ಥಳವಾಗಿದೆ. ಹಝ್ರತ್ ಅದಿ(ರ) ಹೇಳಿದರು. ಖಾಲಿದ್! ನನಗೆ ಮೂರು ದಿನ ಕೊಡಿ. ಐನೂರು ಯೋಧರು ನಿಮ್ಮೊಂದಿಗೆ ಸೇರುತ್ತಾರೆ, ಅವರೊಂದಿಗೆ ನೀವು ಶತ್ರುಗಳ ಮೇಲೆ ದಾಳಿ ಮಾಡುತ್ತೀರಿ. ನೀವು ಅವರನ್ನು ನರಕದ ಬೆಂಕಿಗೆ ಪ್ರವೇಶಿಸುವುದು ಉತ್ತಮ, ಅಂದರೆ, ತೈ ಗೋತ್ರದ ಜನರು ನಿಮ್ಮೊಂದಿಗೆ ಬಂದು ಅವರೊಂದಿಗೆ ಹೋರಾಡುತ್ತಾರೆ. ಹಝ್ರತ್ ಖಾಲಿದ್(ರ) ಅವರ ಸಲಹೆಯನ್ನು ಸ್ವೀಕರಿಸಿದರು. ಹಝ್ರತ್ ಅದಿ(ರ) ತನ್ನ ಜನರ ಬಳಿಗೆ ಬಂದರು. ಅದಕ್ಕು ಮುಂಚೆ ತೈ ಗೋತ್ರದ ಜನರು ತಮ್ಮ ಜನರನ್ನು ಮರಳಿ ಕರೆಸಲು ಬುಝಾಖಾದಿಂದ ಜನರನ್ನು ಕಳುಹಿಸಿದ್ದರು. ಮುಸ್ಲಿಮರು ತುಲೈಹಾದ ಸೇನೆಯ ಮೇಲೆ ದಾಳಿ ಮಾಡುವ ಮೊದಲು ತಾಲಿಹಾದ ಸೈನ್ಯದ ಮೇಲೆ ದಾಳಿ ಮಾಡಲು ಉದ್ದೇಶಿಸಿದ್ದರಿಂದ ಅವರು ತಕ್ಷಣ ಹಿಂತಿರುಗಬೇಕೆಂದು ಗೋತ್ರದ ಜನರು ತುಲೈಹಾದ ಸೈನ್ಯದಲ್ಲಿರುವ ತಮ್ಮ ಜನರಿಗೆ ಸಂದೇಶವನ್ನು ಕಳುಹಿಸಿದರು. ಆದ್ದರಿಂದ ಅವರು ಬಂದು ಈ ದಾಳಿಯನ್ನು ತಡೆಯಬೇಕು. ಅವರು ಈ ಉಪಾಯವನ್ನು ಮಾಡಿದರು. ಹೀಗಾಗಿ ಅವರು ಸಹಾಯಕ್ಕಾಗಿ ತಮ್ಮ ಜನರ ಬಳಿಗೆ ಮರಳಿದರು. ಹಾಗಾಗದೇ ಇದ್ದಿದ್ದರೆ ತುಲೈಹಾ ಮತ್ತು ಅವನ ಸಂಗಡಿಗರು ಅವರನ್ನು ಜೀವಂತ ಬಿಡುತ್ತಿರಲಿಲ್ಲ. ಆಗ ಹಝ್ರತ್ ಅದಿ ಬಂದು ಹಝ್ರತ್ ಖಾಲಿದ್(ರ) ಅವರಿಗೆ ತನ್ನ ಗೋತ್ರದವರು ಪುನಃ ಇಸ್ಲಾಂಗೆ ಮತಾಂತರವಾದ ಬಗ್ಗೆ ತಿಳಿಸಿದರು.

ಇಸ್ಲಾಮಿಕ್ ಸೈನ್ಯಕ್ಕೆ ಸೇರಲು ತನ್ನ ಜನರನ್ನು ಆಹ್ವಾನಿಸಿದ್ದು ಹಝ್ರತ್ ಆದಿ(ರ) ಅವರ ದೊಡ್ಡ ಸಾಧನೆ ಎಂದು ಒಬ್ಬ ಬರಹಗಾರ ಬರೆಯುತ್ತಾನೆ.

ಖಾ಼ಲಿದ್(ರ)ರ ಸೈನ್ಯದಲ್ಲಿ ಬನೂ ಗೋತ್ರದವರು ಸೇರ್ಪಡೆಯಾದದ್ದು ಎದುರಾಳಿಗಳ ಮೊದಲ ಪರಾಜಯವಾಗಿತ್ತು. ಏಕೆಂದರೆ, ತೈ ಗೋತ್ರವು ಅರೇಬಿಯದ ಅತ್ಯಂತ ಬಲಶಾಲಿ ಗೋತ್ರವಾಗಿ ಗಣಿಸಲ್ಪಡುತ್ತಿತ್ತು. ಮಾತ್ರವಲ್ಲ ಇತರ ಗೋತ್ರಗಳು ಅದಕ್ಕೆ ಪ್ರಾಮುಖ್ಯತೆ ಕೊಡುತ್ತಿದ್ದುವು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–260, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2012) (ಅಬ್ದುಲ್ಲಾ ಬಿನ್ ಸಬಾ ಔರ್ ದೂಸ್ರೆ ತಾರೀಖಿ ಅಫ್ಸಾನೆ, ಸಂಪುಟ–2–3, ಪುಟ–92, ಅನುವಾದ ಸಯ್ಯದ್ ಖಲ್ಬಿ ಹಸೀನ್ ರಿಝ್ವಿ, 1427 ಹಿ) (ಸಯ್ಯದುನಾ ಹಝ್ರತ್ ಸಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್ ಅನುವಾದ, ಪುಟ–138, ಶಿರ್ಕತ್ ಪ್ರಿಂಟಿಂಗ್ ಪ್ರೆಸ್ ಲಾಹೋರ್) (ಸಯ್ಯದುನ ಅಬೂಬಕರ್ ಸಿದ್ದೀಖ್ ಶಖ್ಸಿಯ್ಯತ್ ಔರ್ ಕಾರ್ನಾಮೆ, ಡಾ॥ ಅಲಿ ಮುಹಮ್ಮದ್ ಸಲಾಬಿ ಅನುವಾದ, ಪುಟ–324, ಅಲ್‌ಫುರ್ಖಾನ್ ಮುಝಫ್ಫರ್ಗಡ್ ಪಾಕಿಸ್ತಾನ್) (ಹಝ್ರತ್ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್, ಉರ್ದು ಅನುವಾದ ಶೇಖ್ ಅಹ್ಮದ್ ಪಾನಪತಿ, ಪುಟ–157) (ಮುಜಮುಲ್ ಬಲದಾನ್, ಸಂಪುಟ–3, ಪುಟ–6, ಸಂಪುಟ–1, ಪುಟ–119) (ಅಲ್‌ಮುಂಜದ್, ಪುಟ–585, ಫಸ್ಲ್ ಪದ, ಪುಟ–570–571) (ಫರ್ಹಂಗ್ ಸೀರತ್, ಪುಟ–157, ಝುವಾರ ಅಕಾಡಮಿ ಕರಾಚಿ)

ಅನಂತರ ಹಝ್ರ಼ತ್ ಖಾ಼ಲಿದ್(ರ) ಜದೀಲ ಗೋತ್ರವನ್ನು ಎದುರಿಸುವ ಉದ್ದೇಶದಿಂದ ಅನ್ಸರ್ ಕಡೆಗೆ ಹೊರಟರು. ಆಗ ಹಝ್ರ಼ತ್ ಅದಿ(ರ) ಹಝ್ರ಼ತ್ ಖಾ಼ಲಿದ್(ರ)ರೊಡನೆ ಹೇಳಿದರು: ತೈ ಗೋತ್ರದ ಉದಾಹರಣೆ ಒಂದು ಪಕ್ಷಿಯಂತಾಗಿದೆ. ಜದೀಲ ಗೋತ್ರವು ಬನೂ ತೈ ಗೋತ್ರದ ಎರಡು ರೆಕ್ಕೆಗಳಲ್ಲಿ ಒಂದು ರೆಕ್ಕೆಯಾಗಿದೆ. ನೀವು ನನಗೆ ಕೆಲವು ದಿನಗಳ ಕಾಲಾವಕಾಶವನ್ನು ಕೊಡಿರಿ. ಯಾವ ರೀತಿಯಲ್ಲಿ ತೈ ಗೋತ್ರದ ಮತ್ತೊಂದು ಶಾಖೆಯಾದ ಗೌಸನ್ನು ಅಲ್ಲಾಹನು ದುರ್ಮಾರ್ಗದಿಂದ ಹೊರಗೆ ತಂದನೋ ಅಲ್ಲಾಹನು ಬಹುಶಃ ಜದೀಲ ಗೋತ್ರವನ್ನು ಕೂಡ ಸನ್ಮಾರ್ಗದ ಕಡೆಗೆ ತರುವನು. ಹೀಗೆ ಹಝ್ರ಼ತ್ ಅದಿ(ರ) ಸತತವಾಗಿ ಮಾತುಕತೆ ನಡೆಸಿದ ಫಲವಾಗಿ ಆ ಗೋತ್ರದವರು ಕೂಡ ಹಝ್ರ಼ತ್ ಅದಿ(ರ)ರ ಕೈಯಲ್ಲಿ ಬೈಅತ್ ಮಾಡಿದರು. ಹಝ್ರ಼ತ್ ಅದಿ(ರ) ಜದೀಲ ಗೋತ್ರದ ಒಂದು ಸಾವಿರ ಸವಾರರ ಜೊತೆಗೆ ಮುಸ್ಲಿಮರ ಬಳಿಗೆ ಬಂದರು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–260, ದಾರುಲ್ ಕುತುಬ್ ಇಲ್ಮಿಯ ಲೆಬನಾನ್ 2012) (ಮುಜಮುಲ್ ಬಲದಾನ್, ಸಂಪುಟ–1, ಪುಟ–314)

ತೈ ಗೋತ್ರದವರು ಇಸ್ಲಾಂ ಸ್ವೀಕಾರ ಮಾಡಿದ ನಂತರ ಹಝ್ರ಼ತ್ ಖಾ಼ಲಿದ್ ಬಿನ್ ವಲೀದ್(ರ) ತುಲೈಹ ಅಸದಿಯ ಕಡೆಗೆ ರವಾನೆಯಾದರು. ಅವರು ಹಝ್ರ಼ತ್ ಉಖಾಶ ಬಿನ್ ಮಿಹ್‌ಸನ್ ಮತ್ತು ಹಝ್ರ಼ತ್ ಸಾಬಿತ್ ಬಿನ್ ಅಖ್‌ರಮ್‌ರನ್ನು ಶತ್ರುಗಳ ಕುರಿತು ಮಾಹಿತಿ ಪಡೆಯಲು ಕಳುಹಿಸಿದರು.

ಅವರು ಶತ್ರುವನ್ನು ಸಮೀಪಿಸಿದಾಗ, ತುಲೈಹಾ ಮತ್ತು ಅವನ ಸಹೋದರ ಸಲ್ಮಾ ನೋಡಲು ಮತ್ತು ವಿಚಾರಿಸಲು ಹೊರಟರು. ಸಲ್ಮಾ ಹಝ್ರತ್ ಸಾಬಿತ್‌ಗೆ ಬಿಡುವು ನೀಡದೆ ಅವರನ್ನು ಶಹೀದ್ ಮಾಡಿದನು ಮತ್ತು ತುಲೈಹ ತನ್ನ ಸಹೋದರ ಸೋತು ಹೋಗುತ್ತಿರುವುದನ್ನು ಕಂಡಾಗ ಅವನು ತನಗೆ ಅಕಾಶಾರ ವಿರುದ್ಧ ಬೆಂಬಲ ನೀಡಲು ಕೋರಿಕೊಂಡನು. ತದನಂತರ ಅವರಿಬ್ಬು ಸೇರಿ ಅಕಾಶರ ಮೇಲೆ ದಾಳಿ ನಡಿಸಿ ಅವರನ್ನು ಸಹ ಶಹೀದ್ ಮಾಡಿ ತಮ್ಮ ಸ್ಥಳಕ್ಕೆ ಮರಳಿದರು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–261–262, ದಾರುಲ್ ಕುತುಬ್ ಇಲ್ಮಿಯ ಲೆಬನಾನ್ 2012) (ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ–2, ಪುಟ–208–209, ದಾರುಲ್ ಕುತುಬ್ ಇಲ್ಮಿಯ 2003)

ಒಂದು ವರದಿಯ ಪ್ರಕಾರ ಹಝ್ರತ್ ಖಾಲಿದ್ ಬಿನ್ ವಲೀದ್(ರ), ಹಝ್ರತ್ ಆಕಾಶ ಮತ್ತು ಸಾಬಿತ್ ಅನ್ಸಾರಿ ಅವರನ್ನು ಶತ್ರುಗಳ ಬಗ್ಗೆ ತಿಳಿಯಲು ಕಳುಹಿಸಿದರು, ಆಗ ತುಲೈಹನ ಸಹೋದರ ಹಿಬಲ್ ಅವರನ್ನು ಭೇಟಿಯಾಗಿ ಇಬ್ಬರೂ ಅವನನ್ನು ಕೊಂದರು. ಇದರಲ್ಲಿ ಎಳ್ಳರ ಮಟ್ಟಿಗೆ ಸತ್ಯವಿದೆ ಅಥವಾ ಈ ವರದಿಯು ಸರಿಯಾಗಿದೆ ಎಂಬುದು ಅಲ್ಲಾಹನಿಗೆ ತಿಳಿದಿದೆ ತದನಂತರ ಅವನು ಯುದ್ಧಕ್ಕೆ ಸಿದ್ಧನಾಗಿದ್ದನು, ನಂತರ ಯುದ್ಧವಾಯಿತು ನಂತರ ಅವನು ಕೊಲ್ಲಲ್ಪಟ್ಟನು ಏಕೆಂದರೆ ಏನೇ ಇರಲಿ ಈ ಜನರು ಅವರ ಬಗ್ಗೆ ತಿಳಿಯಲು ಹೋಗಿದ್ದರು. ಯುದ್ಧವಾಡಕ್ಕೆ ಹೋಗಿರಲಿಲ್ಲ. ಈ ಸುದ್ದಿ ತುಲೈಹಾಗೆ ತಲುಪಿದಾಗ, ತುಲೈಹಾ ಮತ್ತು ಅವನ ಸಹೋದರ ಸಲ್ಮಾ ಹೊರಬಂದರು. ತುಲೈಹಾ ಹಝ್ರತ್ ಆಕಾಶ ರವರನ್ನು ಶಹೀದ್ ಮಡಿದನು ಮತ್ತು ಅವನ ಸಹೋದರ ಹಝ್ರತ್ ಸಾಬಿತ್ ಅವರನ್ನು ಶಹೀದ್ ಮಾಡಿದನು ಮತ್ತು ನಂತರ ಇಬ್ಬರೂ ಹಿಂತಿರುಗಿದರು. (ತಾರಿಖ್–ಉಲ್–ತಬರಿ, ಸಂಪುಟ–2, ಪುಟಗಳು 261–262, ದಾರ್ ಅಲ್–ಕಿತಾಬ್ ಅಲ್–ಅಲಮಿಯಾ, ಲೆಬನಾನ್ 2012) (ಅಲ್–ಕಾಮಿಲ್ ಫಿ ಅಲ್–ತಾರಿಖ್, ಸಂಪುಟ–2, ಪುಟ–208–209, ದಾರುಲ್ ಕುತುಬ್ ಇಲ್ಮಿಯ 2003)

ಹಝ್ರತ್ ಖಾಲಿದ್(ರ) ತಮ್ಮ ಸೈನ್ಯದೊಂದಿಗೆ ಹಝ್ರತ್ ಸಾಬಿತ್(ರ) ಶಹೀದ್ ಆಗಿ ಬಿದ್ದಿದ ಸ್ಥಳಕ್ಕೆ ತಲುಪಿದರು ಆದರೆ ಅವರಲ್ಲಿ ಒಂದು ಸವಾರಿಯ ಕಾಲು ಅವರ ಮೇಲೆ ಬೀಳುವವರಿಗೆ ಯಾರಿಗೂ ಇದರ ಬಗ್ಗೆ ಅರಿವಿರಲಿಲ್ಲ. ಮುಸ್ಲಿಮರಿಗೆ ಈ ಸಂಗತಿಯು ಬಹಳ ದುಃಖದ ಸಂಗತಿಯಾಗಿತ್ತು. ಗಾಂಭೀರ್ಯದಿಂದ ಇದನ್ನು ನೋಡಿದಾಗ ಹಝ್ರತ್ ಅಕಾಶ ಬಿನ್ ಮಹ್‌ಸನ್ ಸಹ ಶಹೀದ್ ಆಗಿದ್ದಾರೆ ಎಂದು ತಿಳಿಯಿತು. ಇದರಿಂದ ಮುಸ್ಲಿಮರು ಇನ್ನೂ ದುಃಖಕ್ಕೆ ಒಳಗಾಗಿ ಮುಸ್ಲಿಮರ ಸರದಾರರಲ್ಲಿ ಎರಡು ಹಿರಿಯ ಸರದಾರರು ಮತ್ತು ಕುದುರೆ ಸವಾರರಲ್ಲಿ ಎರಡು ಕುದುರೆ ಸವಾರರು ಶಹೀದ್‌ಆದರು ಎಂದು ಹೇಳಿದರು. ಈ ಪರಿಸ್ಥಿತಿಯನ್ನು ಕಂಡು ಹಝ್ರತ್ ಖಾಲಿದ್(ರ)ರವರು ಸೈನ್ಯವನ್ನು ಸಿದ್ಧಗೊಳಿಸಿದರು. ಸೈನ್ಯವನ್ನು ಯುದ್ಧಕ್ಕೆ ಸಿದ್ಧಗೊಳಿಸಿ ತೈ ಗೋತ್ರದ ಕಡೆ ಹೋದರು. ಒಂದು ವರದಿಯ ಪ್ರಕಾರ ಹಝ್ರತ್ ಅದಿ ಬಿನ್ ಹಾತಿಮ್(ರ) ಹೇಳುತ್ತಾರೆ, ನಾನು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರಿಗೆ ನನ್ನ ಬಳಿಗೆ ಬಂದು ಕೆಲವು ದಿನಗಳ ಕಾಲ ಇರುವಂತೆ ಸಂದೇಶವನ್ನು ಕಳುಹಿಸಿದೆ. ನಾನು ತೈನ ಎಲ್ಲಾ ಗೋತ್ರಗಳಿಗೆ ಜನರನ್ನು ಕಳುಹಿಸುತ್ತೇನೆ ಮತ್ತು ಈ ಸಮಯದಲ್ಲಿ ನಿಮ್ಮೊಂದಿಗೆ ಇರುವ ಮುಸ್ಲಿಮರಿಗಿಂತ ಹೆಚ್ಚಿನ ಸೈನ್ಯವನ್ನು ನಿಮಗಾಗಿ ಸಂಗ್ರಹಿಸುತ್ತೇನೆ ಮತ್ತು ನಂತರ ನಾನು ನಿಮ್ಮ ಶತ್ರುಗಳ ವಿರುದ್ಧ ನಿಮ್ಮೊಂದಿಗೆ ಹೋಗುತ್ತೇನೆ. ಆದ್ದರಿಂದ ಹಝ್ರತ್ ಖಾಲಿದ್(ರ) ರವರು ನನ್ನ ಕಡೆಗೆ ಆಗಮಿಸಿದರು.

ಒಂದು ವರದಿಯ ಪ್ರಕಾರ, ಹಝ್ರತ್ ಖಾಲಿದ್(ರ) ಸಾಲ್ಮಿ ಪಟ್ಟಣದ ಉರಕ್ ಎಂಬ ಸ್ಥಳದಲ್ಲಿ ತಂಗಿದರು, ಆದರೆ ಮತ್ತೊಂದು ವರದಿಯ ಪ್ರಕಾರ, ಅವರು ಅಜಾ ಎಂಬ ಸ್ಥಳದಲ್ಲಿ ತಂಗಿದ್ದರು. ಇಲ್ಲಿಂದ ಹಝ್ರತ್ ಖಾಲಿದ್(ರ) ತುಲೈಹಾನನ್ನು ಯುದ್ಧಕ್ಕಾಗಿ ತನ್ನ ಸೈನ್ಯವನ್ನು ಸಂಘಟಿಸಿದರು ಮತ್ತು ಇಬ್ಬರೂ ಬುಝಾಖಾದಲ್ಲಿ ಯುದ್ಧವಾಡಿದರು. ಜನರು ಹೋರಾಡಲು ಪ್ರಾರಂಭಿಸಿದಾಗ, ಬನು ಫಜಾರದ ಏಳು ನೂರು ಜನರೊಂದಿಗೆ ಉಯ್ಯೈನಾ ತುಲೈಹಾ ಅವರೊಂದಿಗೆ ತೀವ್ರವಾಗಿ ಹೋರಾಡಿದರು.

ಉಯ್ಯೈನಾ ಮತ್ತು ತುಲೈಹಾ ಇಬ್ಬರು ಒಟ್ಟಿಗೆ ಸೇರಿದರು. ಅವರು ಮುಸ್ಲಿಮರ ವಿರುದ್ಧ ಹೋರಾಡಿದರು. ತುಲೈಹಾ ತನ್ನ ಗುಡಾರದ ಅಂಗಳದಲ್ಲಿ ಚಾದರವನ್ನು ಮುಚ್ಚಿ ಕುಳಿತಿದ್ದನು. ಅವನು ಪ್ರವಾದಿಯಾಗಿದ್ದರಿಂದ ಅವನು ಗುಡಾರದಲ್ಲಿ ಕುಳಿತು ಅದೃಶ್ಯವನ್ನು ಹೇಳುತ್ತಿದ್ದನು. ಜನರು ಹೋರಾಟದಲ್ಲಿ

ತೊಡಗಿರುವಾಗ ಫಲಿತಾಂಶ ಏನಾಗಬಹುದು ಎಂಬುದನ್ನು ಇಲ್ಲಿಂದಲೇ ಹೇಳುತ್ತೇನೆ ಎಂದು ಹೇಳುತ್ತಿದ್ದನು. ಉಯ್ಯೆನಾ ಯುದ್ಧದಲ್ಲಿ ತೀವ್ರವಾಗಿ ಹಾನಿಗೊಳಗಾದಾಗ, ಅವನು ತುಲೈಹಾನ ಬಳಿಗೆ ಬಂದು ಹೇಳಿದನು, "ಗೇಬ್ರಿಯಲ್ ಇನ್ನೂ ನಿಮ್ಮ ಬಳಿಗೆ ಬಂದಿಲ್ಲವೇ?" ಯುದ್ಧದಲ್ಲಿ ನಮಗೆ ಹಾನಿವುಂಟಾಗುತ್ತಿದೆ. ನೀವು ನನಗೆ ಇಲ್‌ಹಾಮ್ ಆಗುತ್ತದೆ ಮತ್ತು ಏನಾಗಲಿದೆ ಎಂದು ಗೇಬ್ರಿಯಲ್ ನನಗೆ ಹೇಳುತ್ತಾನೆ ಎಂದು ನೀವು ಹೇಳುತ್ತೀರಿ, ಹೇಳಿ, ಇನ್ನೂ ಯಾವುದೇ ಫಲಿತಾಂಶವಿಲ್ಲ? ಗೇಬ್ರಿಯಲ್ ಬರಲಿಲ್ಲವೇ? ಇಲ್ಲ ಅಂದರು ಉಯ್ಯೆನಾ ವಾಪಸ್ ಹೋಗಿ ಯುದ್ಧದಲ್ಲಿ ನಿರತನಾದನು. ಅವನಿಗೆ ಯುದ್ಧದಲ್ಲಿ ಪುನಃ ಹಾನಿವುಂಟಾಗ ಅವನು ಪುನಃ ತುಲೈಹಾನ ಬಳಿಗೆ ಬಂದು, "ಅಯ್ಯೋ! ಗೇಬ್ರಿಯಲ್ ಇನ್ನೂ ನಿಮ್ಮ ಬಳಿಗೆ ಬಂದಿಲ್ಲವೇ?" ಅವರು "ಅಲ್ಲಾಹನ ಮೇಲೆ ಆಣೆ, ಅವರು ಬಂದಿಲ್ಲವೆ" ಎಂದು ಹೇಳಿದನು. ಹೀಗಾದರೆ ನಮ್ಮ ಕೆಲಸ ಮುಗಿದು ಹೋಗುತ್ತದೆ. ಅವನು ಮತ್ತೆ ಯುದ್ಧಭೂಮಿಯಲ್ಲಿ ಹೋರಾಡಲು ಪ್ರಾರಂಭಿಸಿದನು ಮತ್ತು ಈಗ ಅವನು ಮತ್ತೆ ವಿಫಲವಾದಾಗ ಅವನು ತುಲೈಹಾಗೆ ಹೋದನು ಮತ್ತು ಗೇಬ್ರಿಯಲ್ ಇನ್ನೂ ನಿಮ್ಮ ಬಳಿಗೆ ಬಂದಿಲ್ಲವೇ ಎಂದು ಕೇಳಿದನು. ತುಲೈಹಾ ಹೌದು ಅವರು ಬಂದಿದ್ದಾರೆ ಎಂದನು ಉಯ್ಯೆನಾ ಕೇಳಿದನು ಗೇಬ್ರಿಯಲ್ ಏನು ಹೇಳಿದರು? ತುಲೈಹಾ ಹೇಳಿದನು, "ನಿಮ್ಮ ಗಿರಣಿ ಅವರ ಗಿರಣಿಯಂತೆ ಇರುತ್ತದೆ ಮತ್ತು ಒಂದು ಎಂತಹ ಘಟನೆ ಸಂಭವಿಸುತ್ತದೆ, ನಿನ್ನ ಪ್ರಸಿದ್ಧಿ ಹೇಗಿರುತ್ತದೆ ಎಂದರೆ ನೀವು ಅದನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ." ಉಯ್ಯೆನಾ ಹೀಗೆ ಕೇಳಿದಾಗ ತನ್ನ ಮನಸ್ಸಿನಲ್ಲಿ ಅಲ್ಲಾಹನು ಬಲ್ಲವನಾಗಿದ್ದಾನೆ ಶೀಘ್ರದಲ್ಲೇ ಇಂತಹ ಘಟನೆಗಳು ನಡೆಯುತ್ತವೆ ಅದನ್ನು ಬದಲಾಯಿಸಲು ಅಥವಾ ಮರೆಯಲು ಸಾಧ್ಯವಾಗುವುದಿಲ್ಲ ಎಂದು ಹೇಳಿಕೊಂಡನು. ತದನಂತರ ಅವನು ತನ್ನ ಜನರ ಬಳಿಗೆ ಬಂದು ಅವರಿಗೆ ಹೇಳಿದನು: ಓ ಬನು ಫಜಾರಾ! ಅಲ್ಲಾಹನಾಣೆ, ಈ ತುಲೈಹ ಸುಳ್ಳುಗಾರನಾಗಿದ್ದಾನೆ. ಆದ್ದರಿಂದ ನೀವು ಕೂಡಲೇ ಹಿಂತಿರುಗಿ. ಇದನ್ನು ಕೇಳಿ ಎಲ್ಲಾ ಬನು ಫಜಾರರು ಯುದ್ಧದಿಂದ ಹಿಂದೆ ಸರಿದರು ಮತ್ತು ಆ ಜನರು ಸೋತಾಗ ಅವರು ಓಡಿಹೋಗಿ ತುಲೈಹಾನ ಸುತ್ತಲೂ ಒಟ್ಟುಗೂಡಿದರು ಮತ್ತು ನೀವು ನಮಗೆ ಏನು ಮಾಡಲು ಆದೇಶಿಸುತ್ತೀರಿ ಎಂದು ಕೇಳಲು ಪ್ರಾರಂಭಿಸಿದರು. ಇದಕ್ಕೂ ಮುನ್ನ ತುಲೈಹಾ ತನ್ನ ಪತ್ನಿ ನವಾರ್‌ಗಾಗಿ ತನ್ನದೇ ಆದ ಕುದುರೆ ಮತ್ತು ಒಂಟೆಯನ್ನು ಸಿದ್ಧಪಡಿಸಿದ್ದನು. ಅವನು ಎದ್ದು, ತನ್ನ ಕುದುರೆಯ ಮೇಲೆ ಹಾರಿ, ತನ್ನ ಹೆಂಡತಿಯನ್ನು ಸವಾರಿ ಮಾಡಿದನು, ನಂತರ ಅವಳೊಂದಿಗೆ ಓಡಿಹೋದನು ಮತ್ತು ತನ್ನ ಸಂಗಡಿಗರಿಗೆ ಹೇಳಿದನು, "ನಿಮ್ಮಲ್ಲಿ ಯಾರಿಗೆ ಇದು ಸಾಧ್ಯವೋ ಅವರು ಮತ್ತು ಅವರ ಕುಟುಂಬವು ನಾನು ಮಾಡಿದಂತೆ ಮಾಡಲಿ." ಯುದ್ಧಭೂಮಿಯಿಂದ ಓಡಿಹೋಗಿ. ನಂತರ ತುಲೈಹಾ ಸಂಜೆಯ ತನಕ ಹುಶಿಯಾಗೆ ದಾರಿ ಹಿಡಿದನು. ಅವನ ಪಕ್ಷವು ಚದುರಿಹೋಯಿತು ಮತ್ತು ಅಲ್ಲಾಹನು ಅವರಲ್ಲಿ ಅನೇಕರನ್ನು ಕೊಂದನು. ಅನೇಕರು ಕೊಲ್ಲಲ್ಪಟ್ಟರು. ವರದಿಯ ಪ್ರಕಾರ, ತುಲೈಹಾ ಯುದ್ಧಭೂಮಿಯಿಂದ ಓಡಿಹೋಗಿ ನಖ್‌ಅದಲ್ಲಿ ಬಾನು ಕಲ್ಬ್ ಬಳಿ ನೆಲೆಸಿದನು ಮತ್ತು ಅಲ್ಲಿ ಹೋಗಿ ಇಸ್ಲಾಮ್‌ಗೆ ಮತಾಂತರಗೊಂಡನು. ನಖ್‌ಅ ಎಂಬುದು ತಾಯಿಫ್‌ನ ಸುತ್ತಮುತ್ತಲಿನ ಮೆಕ್ಕಾ ಬಳಿಯ ಸ್ಥಳದ ಹೆಸರಾಗಿದೆ. ಹಝ್ರತ್ ಅಬೂಬಕರ್(ರ) ಅವರ ಮರಣದವರೆಗೂ ಅವರು ಬನು ಕಲ್ಬ್‌ನಲ್ಲಿಯೇ ಇದ್ದರು ಎಂದು ಹೇಳಲಾಗುತ್ತದೆ. (ತಾರಿಖ್ ಅಲ್-ತಬರಿ, ಸಂಪುಟ-2, ಪುಟಗಳು-261-262, 264, ದಾರ್ ಅಲ್-ಕಿತಾಬ್ ಅಲ್-ಅಲಮಿಯಾಹ್ ಲೆಬನಾನ್ 2012) (ಮುಜಾಮ್ ಅಲ್-ಬಲ್ದಾನ್, ಸಂಪುಟ-5, ಪುಟ-346, ಸಂಪುಟ-2, ಪುಟ-215)

ಬನು ಆಮಿರ್ ಅವರ ವಿಶೇಷ ಮತ್ತು ಸಾಮಾನ್ಯ ಜನರೊಂದಿಗೆ ಅವನ ಬಳಿ ಕುಳಿತಿದ್ದರು ಮತ್ತು ಸುಲೇಮ್ ಮತ್ತು ಹವಾಜಿನ್ ಗೋತ್ರಗಳ ಸ್ಥಿತಿಯು ಹೀಗೆ ಆಗಿತ್ತು. ಆಗ ಅಲ್ಲಾಹನು ಬನು ಫಝಾರಾ ಮತ್ತು ತುಲೈಹಾರನ್ನು ಹೀನಾಯಕವಾಗಿ ಸೋಲಿಸಿದಾಗ, ನಾವು ಯಾವ ಧರ್ಮದಿಂದ ಬಂದಿದ್ದೇವೆಯೋ ಆ ಧರ್ಮವನ್ನು ನಾವು ಪುನಃ ಪ್ರವೇಶಿಸುತ್ತೇವೆ ಎಂದು ಆ ಗೋತ್ರಗಳು ಬಂದವು. ಅವರು ಸ್ವತಃ ಇಸ್ಲಾಂಗೆ ಮತಾಂತರಗೊಂಡರು ಮತ್ತು ನಾವು ಅಲ್ಲಾಹನ ಮತ್ತು ಅವನ ಸಂದೇಶವಾಹಕರನ್ನು ನಂಬುತ್ತೇವೆ ಮತ್ತು ನಮ್ಮ ಜೀವನ ಮತ್ತು ಆಸ್ತಿಯ ಬಗ್ಗೆ ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ತೀರ್ಪನ್ನು ಸ್ವೀಕರಿಸುತ್ತೇವೆ ಎಂದು ಹೇಳಿದರು. (ತಾರಿಖ್ ಅಲ್-ತಬರಿ, ಸಂಪುಟ-2, ಪುಟಗಳು 260 ರಿಂದ 262, ದಾರ್ ಅಲ್-ಕಿತಾಬ್ ಅಲ್-ಅಲಮಿಯಾ, ಲೆಬನಾನ್ 2012)

ತಾರೀಖ್ ತಬರಿಯಲ್ಲಿ ಬುಝಾಖಾನ ಜನರು ಸೋತ ನಂತರ ಬನು ಆಮಿರ್ ಬಂದು ನಾವು ತ್ಯಜಿಸಿಹೋದ ಧರ್ಮವನ್ನು ಪ್ರವೇಶಿಸುತ್ತೇವೆ ಎಂದು ಹೇಳುವ ವರದಿಯು ಇದೆ. ಹಝ್ರತ್ ಖಾಲಿದ್(ರ) ಅವರು ಅಹ್ಲ್-ಎ-ಬುಝಾಖಾ ಅಂದರೆ ಅಸದ್, ಘಾತ್ಫಾನ್ ಮತ್ತು ತೈ ಅವರಿಂದ ತೆಗೆದುಕೊಂಡ ಷರತ್ತಿನ ಮೇಲೆ ಅವರಿಂದ ಬೈಅತ್ ಅನ್ನು ಸ್ವೀಕರಿಸಿದರು ಮತ್ತು ಅವರೆಲ್ಲರೂ ಇಸ್ಲಾಂ ಧರ್ಮವನ್ನು ಸ್ವೀಕರಿಸುವ ಷರತ್ತಿನ ಮೇಲೆ ಬೈಅತ್ ಅನ್ನು ಸ್ವೀಕರಿಸಿದರು. ಈ ಬೈಅತ್‌ನ ಪದಗಳು ಹೀಗಿವೆ: ಅಲ್ಲಾಹನ ವಾಗ್ದಾನವನ್ನು ನಿಮ್ಮಿಂದ ತೆಗೆದುಕೊಳ್ಳಲಾಗುತ್ತದೆ, ನೀವು ಖಂಡಿತವಾಗಿಯೂ ಅಲ್ಲಾಹನ ಮತ್ತು ಅವನ ಸಂದೇಶವಾಹಕರನ್ನು ನಂಬುತ್ತೀರಿ ಮತ್ತು ನೀವು ನಮಾಝನ್ನು ಅವಶ್ಯವಾಗಿ ನಿರ್ವಹಿಸುತ್ತೀರಿ ಮತ್ತು ಝಕಾತ್ ಅನ್ನು ಅವಶ್ಯವಾಗಿ ಪಾವತಿಸುತ್ತೀರಿ ಮತ್ತು ನೀವು ಅದರ ಮೇಲೆಯೇ ನಿಮ್ಮ ಪುತ್ರರು ಮತ್ತು ನಿಮ್ಮ ಹೆಂಡತಿಯರ ಪರವಾಗಿ ಬೈಅತ್ ಮಾಡುತ್ತೀರಿ. ಅದಕ್ಕೆ ಅವರೆಲ್ಲರು ಹೌದು ಎಂದು ಹೇಳುತ್ತಿದ್ದರು. (ಅಲ್-ಕಾಮಿಲ್ ಫಿ ಅಲ್-ತಾರಿಖ್, ಸಂಪುಟ-2, ಪುಟಗಳು 210-211, ಅಲ್-ಕಿತಾಬ್ ಅಲ್-ಅಲಮಿಯಾ 2003 ರಿಂದ ಪ್ರಕಟಿಸಲಾಗಿದೆ)

ತಮ್ಮ ಬಳಿಯಲ್ಲಿದ್ದ ಮುಸ್ಲಿಮರನ್ನು ಬೆಂಕಿಯಿಂದ ಸುಟ್ಟ, ಅವರನ್ನು ವಿರೂಪಗೊಳಿಸಿದ ಮತ್ತು ಮುಸ್ಲಿಮರ ಮೇಲೆ ದಾಳಿ ನಡೆಸಿದ ಬನೂ ಆಮಿರ್, ಅಸದ್, ಹವಾಜ್ಹಿನ್, ಸುಲೈಮ್ ಮತ್ತು ತೈ ಗೋತ್ರದ ಧರ್ಮತ್ಯಾಗಿಗಳನ್ನು ಮುಸ್ಲಿಮರಿಗೆ ಒಪ್ಪಿಸುವ ತನಕ ಅವರಲ್ಲಿ ಯಾರ ಬೈಅತನ್ನು ಕೂಡ ಹಝ್ರತ್ ಖಾಲಿದ್ ಸ್ವೀಕಾರ ಮಾಡಲಿಲ್ಲ.

ಮುಸ್ಲಿಮರಿಗೆ ಹಾನಿ ಮಾಡಿದವರನ್ನು ಕೊಂದು ಅವರ ಮನೆಗಳಿಗೆ ಬೆಂಕಿ ಹಚ್ಚಿದವರನ್ನು ನಮಗೆ ಒಪ್ಪಿಸಿದರೆ ಹಝ್ರತ್ ಖಾಲಿದ್(ರ) ಅವರಿಂದ ಈ ಬೈಅತ್ ತೆಗೆದುಕೊಂಡರು. ಮುಸ್ಲಿಮರು ಬೆಂಕಿಯಲ್ಲಿ ಸುಟ್ಟುಹೋದರು. ನಂತರ ಅವನು ಅವುಗಳನ್ನು ಮುಸಲ್ಲ ಮಾಡಿ ಅವರನ್ನು ಬೆಂಕಿಯಲ್ಲಿ ಸುಟ್ಟುಹಾಕಿದನು. ಅವನು ಈ ಎಲ್ಲಾ ಕೆಲಸಗಳನ್ನು ಮಾಡಿದನು. ನೀನು ನಮ್ಮ ಕೈಗೆ ಒಪ್ಪಿಸುತ್ತೀಯ, ಆಗ ನಿನ್ನ ಬೈಅತ್ ಅಂಗೀಕಾರವಾಗುತ್ತದೆ ಎಂದರು. ಎಲ್ಲ ಆರೋಪಿಗಳು, ಅಪರಾಧಿಗಳು ಹಾಜರಿರಬೇಕು. ಹೀಗೆ ಈ ಎಲ್ಲಾ ಗೋತ್ರಗಳು ಆ ಜನರನ್ನು ಹಝ್ರತ್ ಖಾಲಿದ್(ರ) ಅವರಿಗೆ ಹಸ್ತಾಂತರಿಸಿದ ನಂತರ ಹಝ್ರತ್ ಖಾಲಿದ್(ರ) ಅವರು ಈ ಗೋತ್ರಗಳ ಬೈಅತ್ ಅನ್ನು ಸ್ವೀಕರಿಸಿದರು ಮತ್ತು ಮುಸ್ಲಿಮರಿಗೆ ಅನ್ಯಾಯ ಮಾಡಿದವರು ಮತ್ತು ಹಿಂಸೆ ಮಾಡುವವರ ಕೈಕಾಲುಗಳನ್ನು ಕತ್ತರಿಸಿ ಬೆಂಕಿಯಲ್ಲಿ ಸುಟ್ಟುಹಾಕಲಾಯಿತು. (ಅಲ್-ಇಸ್ತಿಕ್ಸಾ ಅಲ್‌ಅಖ್ಬಾರ್, ದುಲ್ ಮಗ್ರಿಬ್ ಅಲ್-ಅಕ್ಸಾ, ಸಂಪುಟ-1, ಪುಟ-76, ದಾರ್ ಅಲ್-ಕಿತಾಬ್ 1997)

ಹಝ್ರತ್ ಅಬೂಬಕರ್(ರ)ರಿಗೆ ಹಝ್ರತ್ ಖಾಲಿದ್(ರ) ಬರೆದ ಒಂದು ಪತ್ರದ ಪ್ರಸ್ತಾಪ ಬರುತ್ತದೆ. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಖುರ್ರ ಬಿನ್ ಹುವೇರ ಮತ್ತು ಅವನ ಕೆಲವು ಸಂಗಡಿಗರನ್ನು ಹಗ್ಗದಿಂದ ಕಟ್ಟಿ ಹಾಕಿದರು. ಅನಂತರ ಖುರ್ರ ಮತ್ತು ಇತರ ಕೈದಿಗಳನ್ನು ಹಝ್ರತ್ ಖಾಲಿದ್(ರ) ಹಝ್ರತ್ ಅಬೂಬಕರ್(ರ) ಬಳಿಗೆ ಕಳುಹಿಸಿದರು. ಅನಂತರ ಹೀಗೆ ಪತ್ರ ಬರೆದರು: ಬನೂ ಆಮಿರ್ ಗೋತ್ರದವರು ಇಸ್ಲಾಮಿನಿಂದ ಮುಖ ತಿರುಗಿಸಿದ ನಂತರ ಪುನಃ ಇಸ್ಲಾಮಿಗೆ ಪ್ರವೇಶಿಸಿರುವರು. ಮುಸ್ಲಿಮರ ಮೇಲೆ ವಿವಿಧ ತರದ ದೌರ್ಜನ್ಯಗಳನ್ನು ಮಾಡಿದ ಜನರನ್ನು ನನ್ನ ಬಳಿಗೆ ತರುವ ತನಕ ನನ್ನ ಯುದ್ಧ ಯಾವ ಗೋತ್ರದವರೊಂದಿಗೆ ನಡೆಯುತ್ತೋ ಅಥವಾ ಯುದ್ಧ ನಡೆಯದೇ ಸಂಧಾನವಾಯಿತೋ ಅವರಲ್ಲಿ ಯಾರಿಂದಲೂ ನಾನು ಬೈಅತ್ ಸ್ವೀಕಾರ ಮಾಡಿಲ್ಲ. ನಾನು ಅವರನ್ನು ವಧಿಸಿದೆ. ಖುರ್ರ ಮತ್ತು ಅವನ ಸಂಗಡಿಗರನ್ನು ನಿಮ್ಮ ಬಳಿಗೆ ಕಳುಹಿಸುತ್ತಿದ್ದೇನೆ.

ಹಝ್ರತ್ ಅಬೂಬಕರ್(ರ) ಕೂಡ ಹಝ್ರತ್ ಖಾಲಿದ್(ರ)ರಿಗೆ ಒಂದು ಪತ್ರ ಬರೆದರು. ಅದನ್ನು ನಾಫೀ ವರದಿ ಮಾಡಿರುವರು. ಖಾಲಿದ್ ಬರೆದ ಪತ್ರಕ್ಕೆ ಉತ್ತರವಾಗಿ ಹಝ್ರತ್ ಅಬೂಬಕರ್(ರ) ಖಾಲಿದ್‌ರಿಗೆ(ರ) ಹೀಗೆ ಪತ್ರ ಬರೆದರು: ನೀವು ಮಾಡಿದ ಎಲ್ಲದಕ್ಕೂ ಮತ್ತು ನಿಮಗೆ ಲಭಿಸಿದ ವಿಜಯಕ್ಕೂ ಅಲ್ಲಾಹನು ಪ್ರತಿಫಲ ನೀಡಲಿ. ನೀವು ನಿಮ್ಮ ಪ್ರತಿ ಕೆಲಸದಲ್ಲೂ ಅಲ್ಲಾಹನ ಭಯವಿರಿಸಿಕೊಳ್ಳು. **ಇನ್ನಲ್ಲಾಹ ಮಅಲ್ಲದೀನತ್ತಖೌ ವಲ್ಲದೀನ ಹುಮ್ ಮುಹ್‌ಸಿನೂನ್**. ಖಂಡಿತವಾಗಿಯೂ ಅಲ್ಲಾಹನು ದೇವಭಕ್ತಿಯನ್ನು ತೋರಿಸುವವರ ಮತ್ತು ಔದಾರ್ಯ ಮಾಡುವವರ ಜೊತೆಗೆ ಇರುತ್ತಾನೆ. ನೀನು ಅಲ್ಲಾಹನ ಕೆಲಸದಲ್ಲಿ ಸಂಪೂರ್ಣವಾದ ಪ್ರಯತ್ನವನ್ನು ಮಾಡು. ಸೋಮಾರಿಯಾಗಬೇಡ. ಮುಸ್ಲಿಮರನ್ನು ವಧಿಸಿದವನನ್ನು ಕೈಗೆ ಸಿಕ್ಕರೆ ಖಂಡಿತವಾಗಿಯೂ ಅವನನ್ನು ವಧಿಸಿ ಹಾಕು. ಇತರರಿಗೆ ಪಾಠವಾಗುವ ರೀತಿಯಲ್ಲಿ ವಧಿಸಿ ಹಾಕು. ಯಾರು ಅಲ್ಲಾಹನ ಆದೇಶವನ್ನು ನಿರಾಕರಿಸಿದರೋ ಮತ್ತು ಯಾರು ಇಸ್ಲಾಮಿನ ಶತ್ರುವಾಗಿರುವರೋ ಅವರನ್ನು ಕೊಲ್ಲುವುದರಿಂದ ಇಸ್ಲಾಮಿಗೆ ಪ್ರಯೋಜನವಿರುವುದಾದರೆ, ಅಂತಹವರನ್ನು ಕೊಂದುಹಾಕಿರಿ. ಹಝ್ರತ್ ಖಾಲಿದ್(ರ) ಒಂದು ತಿಂಗಳ ಕಾಲ ಬಝಾಖದಲ್ಲಿ ತಂಗಿದರು. ಈ

ವಿಧದ ಜನರನ್ನು ಹುಡುಕುತ್ತಾ ಅಂಥವರನ್ನು ಬಂಧಿಸಿದರು. (ತಾರೀಖ್ ಅತ್ತಬರಿ, ಸಂಪುಟ-2, ಪುಟ-265, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) ಹೀಗೆ ಹಝ್ರತ್ ಅಬೂಬಕರ್(ರ)ರ ನಿರ್ದೇಶನದ ಪ್ರಕಾರ ಅವರಿಗೆ ಕಠಿಣವಾದ ಶಿಕ್ಷೆಗಳನ್ನು ನೀಡಲಾಯಿತು.

ಖುರ್ರ ಬಿನ್ ಹುವೇರ ಮತ್ತು ಉಯೈನ ಬಿನ್ ಹಿಸ್ನ್ ಕೈದಿಯಾಗಿ ಮದೀನಕ್ಕೆ ಬಂದ ಬಗ್ಗೆ ತಾರೀಕ್ ತಬರಿಯಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ. ಹಝ್ರತ್ ಖಾಲಿದ್(ರ) ಬನೂ ಆಮಿರರ ಸಮಸ್ಯೆಯನ್ನು ಬಗೆಹರಿಸಿ ಅವರಿಂದ ಬೈಅತ್ ಪಡೆದರು ಮತ್ತು ಉಯೈನ ಬಿನ್ ಹಿಸ್ನ್ ಮತ್ತು ಖುರ್ರ ಬಿನ್ ಹವೇರರನ್ನು ಬಂಧಿಸಿ ಹಝ್ರತ್ ಅಬೂಬಕರ್(ರ)ರ ಬಳಿಗೆ ಕಳುಹಿಸಿದರು. ಅವರು ಹಝ್ರತ್ ಅಬೂಬಕರ್(ರ)ರ ಮುಂದೆ ಬಂದಾಗ ಖುರ್ರ ಹೇಳಿದನು: ಹೇ ಪ್ರವಾದಿಯ ಖಲೀಫರೇ, ನಾನು ಮುಸ್ಲಿಮನಾಗಿರುವೆನು. ನಾನು ಇಸ್ಲಾಂ ಸ್ವೀಕಾರ ಮಾಡಿರುವೆನು ಎಂಬುದಕ್ಕೆ ಹಝ್ರತ್ ಅಮ್ರ್ ಬಿನ್ ಆಸ್ ಸಾಕ್ಷಿಯಾಗಿರುವರು. ಅವರು ಯಾತ್ರೆ ಮಾಡುತ್ತಾ ನನ್ನ ಬಳಿಗೆ ಬಂದಿದ್ದರು. ನಾನು ಅವರನ್ನು ನನ್ನ ಅತಿಥಿಯನ್ನಾಗಿ ಇರಿಸಿದೆ. ಅವರಿಗೆ ಗೌರವಾದರಗಳನ್ನು ಕೊಟ್ಟೆ ಮತ್ತು ಅವರನ್ನು ಸಂರಕ್ಷಿಸಿದೆ. ಹಝ್ರತ್ ಅಬೂಬಕರ್(ರ) ಹಝ್ರತ್ ಅಮ್ರ್ ಬಿನ್ ಆಸ್‌ರನ್ನು ಕರೆದು ಅದರ ರುಜುವಾತು ಮಾಡಿಸಿದರು. ಖುರ್ರ ಹೇಳಿದ ಎಲ್ಲ ಘಟನೆಯನ್ನು ಹಝ್ರತ್ ಅಮ್ರ್ ಕೂಡ ಹೇಳಿದರು. ಅವರು ಝಕಾತಿನ ಕುರಿತು ಕೂಡ ಹೇಳಲು ಹೊರಟಾಗ ಖುರ್ರ ಹೇಳಿದನು. ಇಷ್ಟು ಸಾಕು. ಇನ್ನೇನೂ ಹೇಳಬೇಡ. ಆಗ ಅಮ್ರ್ ಹೇಳಿದರು: ಅಲ್ಲಾಹನ ಕಾರುಣ್ಯವಿರಲಿ, ಹಝ್ರತ್ ಅಬೂಬಕರ್(ರ)ರೊಡನೆ ಪೂರ್ತಿ ಸಂಗತಿಗಳನ್ನು ಹೇಳದೇ ಇರಲು ಸಾಧ್ಯವಲ್ಲ. ಹೀಗೆ ಪೂರ್ತಿ ಸಂಗತಿಯನ್ನು ಹೇಳಿದರು. ಝಕಾತಿಗೆ ಸಂಬಂಧಿಸಿ ಮೊದಲು ಖುರ್ರ ಹೀಗೆ ಹೇಳಿದನು: ಝಕಾತಿನ ಬೇಡಿಕೆಯನ್ನು ಕೊನೆಗೊಳಿಸಿದರೆ ಅರೇಬಿಯರು ನಮ್ಮ ಮಾತನ್ನು ಆಲಿಸುವೆವು. ಎಂದರೆ ಝಕಾತನ್ನು ಪಡೆಯಬಾರದು. ಆಗ ಹಝ್ರತ್ ಅಮ್ರ್ ಹೇಳಿದರು. ಹಾಗಾದರೆ, ನೀವು ಕಾಫಿರ್ ಆಗಿರುವಿರಿ ಎಂದಾಯಿತು. ಆಗ ಖುರ್ರ ಹೇಳಿದನು: ಹಾಗಾದರೆ, ಝಕಾತ್ ಪಡೆಯಲು ಒಂದು ನಿಶ್ಚಿತವಾದ ಕಾಲಾವಧಿಯನ್ನು ನೀಡಿರಿ. ಅಷ್ಟರೊಳಗೆ ನಾವು ಒಟ್ಟುಸೇರಿ ಝಕಾತ್ ಕೊಡಬೇಕೋ ಬೇಡವೋ ಎಂಬುದರ ತೀರ್ಮಾನ ಮಾಡುವೆವು. ಹೇಗಿದ್ದರೂ ಅವನ ಮಾತುಗಳನ್ನು ಆಲಿಸಿದ ನಂತರವೂ ಹಝ್ರತ್ ಅಬೂಬಕರ್(ರ) ಅವನನ್ನು ಕ್ಷಮಿಸಿದರು ಮತ್ತು ಅವರಿಗೆ ಜೀವದಾನ ನೀಡಿದರು.

ಉಯೈನ ಬಿನ್ ಹಿಸ್ನನಿನ ಎರಡೂ ಕೈಗಳನ್ನು ಕುತ್ತಿಗೆಗೆ ಸೇರಿಸಿ ಹಗ್ಗದಿಂದ ಕಟ್ಟಿ ಮದೀನಕ್ಕೆ ತರಲಾಗಿತ್ತು. ಮದೀನದ ಹುಡುಗರು ಖರ್ಜೂರದ ಶಾಖೆಗಳನ್ನು ಅವನ ದೇಹಕ್ಕೆ ಚುಚ್ಚುತ್ತಾ ಹೀಗೆ ಕೇಳುತ್ತಿದ್ದರು: ಎಲೈ ಅಲ್ಲಾಹನ ಶತ್ರು, ನೀನು ಸತ್ಯವಿಶ್ವಾಸ ಕೈಗೊಂಡ ನಂತರ ಪುನಃ ಕಾಫಿರ್ ಆಗಿ ಬಿಟ್ಟೆಯಾ? ಆಗ ಅವನು ಹೀಗೆ ಹೇಳುತ್ತಿದ್ದನು: ನಾನು ಇಂದಿನ ದಿನದ ತನಕ ಅಲ್ಲಾಹನಲ್ಲಿ ನಂಬಿಕೆ ಇರಿಸಿಯೇ ಇಲ್ಲ. ಹೇಗಿದ್ದರೂ ಹಝ್ರತ್ ಅಬೂಬಕರ್(ರ) ಅವನನ್ನು ಕ್ಷಮಿಸಿದರು ಮತ್ತು ಅವರ ಜೀವವನ್ನು ರಕ್ಷಿಸಿದರು. (ತಾರೀಖ್ ಅತ್ತಬರಿ, ಸಂಪುಟ-2, ಪುಟ-263-264, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012)

ಒಬ್ಬ ಲೇಖಕ ಬರೆಯುತ್ತಾರೆ: ಉಯೈನನನ್ನು ಖಲೀಫತುರ್‌ರಸೂಲ್ ಹಝ್ರತ್ ಅಬೂಬಕರ್(ರ)ರ ಮುಂದೆ ಹಾಜರು ಪಡಿಸಲಾಯಿತು. ಹಝ್ರತ್ ಅಬೂಬಕರ್(ರ)ರಿಂದ ಅವನು ಎಂದಿಗೂ ಊಹಿಸದಂತಹ ಕ್ಷಮೆಯ ವರ್ತನೆಯನ್ನು ಅವನು ಕಂಡನು. ಹಝ್ರತ್ ಅಬೂಬಕರ್(ರ) ಆತನ ಕೈಗಳನ್ನು ಬಿಚ್ಚಲು ಆಜ್ಞಾಪಿಸಿದರು. ಅನಂತರ ಪಶ್ಚಾತ್ತಾಪ ಮಾಡಲು ಹೇಳಿದರು. ಪ್ರಾಮಾಣಿಕವಾದ ಪಶ್ಚಾತ್ತಾಪ ಮಾಡುತ್ತಿರುವುದಾಗಿ ಉಯೈನ ಘೋಷಿಸಿದನು. ತನ್ನ ತಪ್ಪುಗಳನ್ನು ಒಪ್ಪಿಕೊಂಡು ಕ್ಷಮೆ ಕೇಳಿದನು. ಅನಂತರ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದನು ಹಾಗೂ ಇಸ್ಲಾಮಿನ ಅಧ್ಯಾಪನೆಗಳ ಪ್ರಕಾರ ಉತ್ತಮವಾಗಿ ಜೀವಿಸಿದನು. (ಸಯ್ಯಿದುನಾ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಡಾ॥ ಅಲಿ ಮುಹಮ್ಮದ್ ಅಸ್ಸಲಾಬಿ ಅನುವಾದ, ಪುಟ-326, ಅಲ್‌ಫುರ್ಖಾನ್ ಮುಝಫ್ಫರ್‌ಗಡ್, ಪಾಕಿಸ್ತಾನ್)

ಸುಳ್ಳು ಪ್ರವಾದಿತ್ವ ವಾದಿ ಮತ್ತು ದಂಗೆಗಾರನಾದ ತುಲೈಹ ಅಸದಿ ಕೂಡ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದ್ದನು. ಇದರ ಬಗ್ಗೆ ಹೀಗೆ ಬರೆಯಲಾಗಿದೆ. ತುಲೈಹ ಅಸದಿ ಇಸ್ಲಾಂ ಸ್ವೀಕಾರ ಮಾಡಲು ಕಾರಣವಾದ ಸಂಗತಿಯೇನೆಂದರೆ, ಅಸದ್ ಘತ್‌ಫಾನ್ ಮತ್ತು ಬನೂ ಆಮಿರ್ ಗೋತ್ರಗಳು ಮುಸ್ಲಿಮರಾದರು ಎಂಬ ಸುದ್ದಿ ಅವನಿಗೆ ಮುಟ್ಟಿತು. ಆಗ ಅವನು ಕೂಡ ಮುಸ್ಲಿಮನಾದನು. ಅನಂತರ ಹಝ್ರತ್ ಅಬೂಬಕರ್(ರ)ರ ನೇತೃತ್ವದಲ್ಲಿ ಉಮ್ರ ಮಾಡಲು ಮಕ್ಕಕ್ಕೆ ಹೋದನು. ಅವನು ಮದೀನದ ಬದಿಯಿಂದ ಸಾಗುತ್ತಿದ್ದಾಗ, ಇವನು ತುಲೈಹ ಆಗಿರುವನು ಎಂದು ಹಝ್ರತ್ ಅಬೂಬಕರ್(ರ)ರೊಡನೆ ಹೇಳಲಾಯಿತು. ಹಝ್ರತ್ ಅಬೂಬಕರ್(ರ) ಹೇಳಿದರು: ಇವನನ್ನು ನಾನು ಏನು ಮಾಡಲಿ, ಇವನನ್ನು ಬಿಟ್ಟುಬಿಡಿ. ಅಲ್ಲಾಹನು ಇವನನ್ನು ಇಸ್ಲಾಮಿನ ಕಡೆಗೆ ತಂದಿರುವನು. ತುಲೈಹ ಮಕ್ಕದ ಕಡೆಗೆ ಹೋಗಿ ಉಮ್ರ ಮಾಡಿದನು. ಹಝ್ರತ್ ಉಮರ್(ರ) ಖಲೀಫರಾದಾಗ ಅವರ ಕೈಯಲ್ಲಿ ಬೈಅತ್ ಮಾಡಲು ಬಂದನು. ಹಝ್ರತ್ ಉಮರ್(ರ) ಹೇಳಿದರು: ನೀನು ಉಕಾಶ ಮತ್ತು ಸಾಬಿತನನ್ನು ಶಹೀದ್ ಮಾಡಿದ್ದೀಯ. ಅಲ್ಲಾಹನಾಣೆ, ಖಂಡಿತವಾಗಿಯೂ ನಾನು ನಿನ್ನನ್ನು ಇಷ್ಟಪಡುವುದಿಲ್ಲ. ತುಲೈಹ ಹೇಳಿದನು: ಹೇ ಅಮೀರಲ್ ಮೂಮಿನೀನ್, ನನ್ನ ಕೈಗಳಿಂದ ಗೌರವಾನ್ವಿತರಾದ ಆ ಇಬ್ಬರ ಬಗ್ಗೆ ನೀವೇಕೆ ದುಃಖಿಸುತ್ತೀರಿ. ನಾನು ಅವರಿಬ್ಬರ ಕೈಗಳಿಂದ ನಿಂದಿತನಾಗಿ ಸಾವನ್ನಪ್ಪಲಿಲ್ಲ ಮತ್ತು ನರಕಕ್ಕೆ ಹೋಗಲಿಲ್ಲ. ಇಂದು ನಾನು ಇಸ್ಲಾಮನ್ನು ಸ್ವೀಕಾರ ಮಾಡಿಕೊಂಡು ಅಲ್ಲಾಹನ ಕೃಪೆಯನ್ನು ಪಡೆಯುವವನಾಗುತ್ತಿರುವನು. ಹಝ್ರತ್ ಉಮರ್(ರ) ಅವನ ಬೈಅತ್ ಸ್ವೀಕಾರ ಮಾಡಿದರು. (ತಾರೀಖ್ ಅತ್ತಬರಿ, ಸಂಪುಟ-2, ಪುಟ-264, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್, 2012)

ಇರಾಕಿನ ಯುದ್ಧಗಳಲ್ಲಿ ತುಲೈಹ ಇರಾನಿನ ವಿರುದ್ಧ ಮಹತ್ತಾದ ಪಾತ್ರವನ್ನು ವಹಿಸಿದ್ದನು. ಮುಸ್ಲಿಮನಾದ ನಂತರ ಇರಾಕಿನ ಯುದ್ಧಗಳಲ್ಲಿ ಇವನು ಬಹಳ ಉತ್ತಮವಾಗಿ ಹೋರಾಡಿದನು ಮತ್ತು ನಹಾವಂದ್ ಯುದ್ಧದಲ್ಲಿ ಹಿಜರಿ 21ರಲ್ಲಿ ಶಹೀದ್ ಆದನು. (ಹಝ್ರತ್ ಸಯ್ಯಿದುನಾ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್, ಪುಟ-144, ಬುಕ್ ಕಾರ್ನರ್ ಶೋರೂಮ್ ಬುಕ್ ಸ್ಟ್ರೀಟ್, ಜ್ಹೇಲಮ್ ಪಾಕಿಸ್ತಾನ್) (ಅಲ್‌ಅಸಾಬ ಫೀ ತಮೀಝೀಸ್ಸಹಾಬ, ಭಾಗ-3, ಪುಟ-441, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005)

ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರ ಝಫರ್, ಇದು ಉಮ್ ಝಿಮ್ಲ್ ಸಲ್ಮಾ ಬಿಂತ್ ಉಮ್ಮೆ ಖಿರ್ಫಾ ಕಡೆಗೆ ಹೋಗಲು ಮತ್ತು ಮುನ್ನಡೆಯಲು ಒಂದು ಪ್ರದೇಶವಾಗಿದೆ. ಉಮ್ಮ್ ಝಿಮ್ಲ್ ಅವರ ಹೆಸರು ಸಲ್ಮಾ ಬಿಂತ್ ಮಲಿಕ್ ಬಿನ್ ಹುದೈಫಾ ಎಂದಾಗಿದೆ, ಆಕೆಯ ತಾಯಿ ಉಮ್ಮ್ ಖಿರ್ಫಾ ಬಿಂತ್ ರಬಿಯಾ ಅವರನ್ನು ಹೋಲುತ್ತಿದ್ದರು. ಅವರು ಗೌರವ ಮತ್ತು ಖ್ಯಾತಿಯಲ್ಲಿ ತನ್ನ ತಾಯಿಯಂತೆಯೇ ಇದ್ದರು ಮತ್ತು ಅವರು ಉಮ್ಮು ಖಿರ್ಫಾದ ಒಂಟೆಯನ್ನು ಹೊಂದಿದ್ದರು. (ತಾರಿಖ್ ಅಲ್-ತಬರಿ, ಸಂಪುಟ-2, ಪುಟ-265, ದಾರ್ ಅಲ್-ಕಿತಾಬ್ ಅಲ್-ಅಲಮಿಯಾ ಲೆಬನಾನ್ 2012)

ಉಮ್ಮು ಖಿರ್ಫಾದ ಪರಿಚಯವೆಂದರೆ ಉಮ್ಮು ಖಿರ್ಫಾಳ ಹೆಸರು ಫಾತಿಮಾ ಬಿಂತ್ ರಬಿಯಾ ಮತ್ತು ಅವಳು ಬನು ಫಜಾರಾ ಮುಖ್ಯಸ್ಥೆಯಾಗಿದ್ದಳು. ಈ ಮಹಿಳೆ ತನ್ನ ಶಕ್ತಿ ಮತ್ತು ಭದ್ರತಾ ವ್ಯವಸ್ಥೆಗಳಿಗೆ ಒಂದು ಉದಾಹರಣೆ ಎಂದು ಪರಿಗಣಿಸಲಾಗಿದೆ. ಅವಳ ಮನೆಯಲ್ಲಿ ಎಲ್ಲಾ ಸಮಯದಲ್ಲೂ ಐವತ್ತು ಕತ್ತಿಗಳು ನೇತಾಡುತ್ತಿದ್ದವು ಮತ್ತು ಕತ್ತಿಯ ಐವತ್ತು ಜನರು ಹಾಜರಿದ್ದರು. ಅವರೆಲ್ಲರೂ ಅವಳ ಪುತ್ರರು ಮತ್ತು ಮೊಮ್ಮಕ್ಕಳಾಗಿದ್ದರು. ಅವಳ ಒಬ್ಬ ಮಗನಿಗೆ ಕರ್ಫಾ ಎಂದು ಹೆಸರಿಸಲಾಯಿತು ಏಕೆಂದರೆ ಅವಳ ಉಪನಾಮ ಉಮ್ಮ್ ಕರ್ಫಾ ಮತ್ತು ಅವಳ ನಿಜವಾದ ಹೆಸರು ಫಾತಿಮಾ ಬಿಂತ್ ರಬಿಯಾ. ಮದೀನಾದಿಂದ ಏಳು ರಾತ್ರಿಗಳ ಪ್ರಯಾಣದ ದೂರದಲ್ಲಿರುವ ಅಲ್-ಕುರಾ ಕಣಿವೆಯ ಒಂದು ಬದಿಯಲ್ಲಿ ಅವರ ಮನೆ ಇತ್ತು. (ಪೈಗಂಬರೆ ಇಸ್ಲಾಮ್ ಗಝ್ವಾತ್ ಔರ್ ಸರಾಯಾ, ಹಕೀಮ್ ಮಹ್ಮೂದ್ ಅಹ್ಮದ್ ಝಫರ್, ಪುಟ-447, ಶಫೀಕ್ ಪ್ರೆಸ್)

ಉಮ್ಮ್ ಕರ್ಫಾ ಕಡೆಗೆ ಒಂದು ಯುದ್ಧ 6 ಹಿಜರಿನಲ್ಲಿ ನಡೆಯಿತು. ಉಮ್ಮು ಕರ್ಫಾ ಅವರನ್ನು ನಿಗ್ರಹಿಸಲು ಒಂದು ಕಾರಣವೆಂದರೆ ಅವಳು ಮದೀನಾವನ್ನು ಆಕ್ರಮಣ ಮಾಡಲು ಮತ್ತು ಪ್ರವಾದಿ(ಸ) ಅವರನ್ನು ಹತ್ಯೆ ಮಾಡಲು ಸಂಚು ರೂಪಿಸಿದ್ದಳು. ಒಮ್ಮೆ ಅವಳು ತನ್ನ ಮೂವತ್ತು ಮಂದಿ ಪುತ್ರರು ಮತ್ತು ಮೊಮ್ಮಕ್ಕಳ ತುಕಡಿಯನ್ನು ಸಿದ್ಧಪಡಿಸಿ ಮದೀನಾವನ್ನು ಆಕ್ರಮಿಸಿ ಪ್ರವಾದಿ(ಸ) ಅವರನ್ನು ಕೊಲ್ಲಲು ಹೇಳಿದಳೆಂದು ಲೇಖಕರೊಬ್ಬರು ಬರೆಯುತ್ತಾರೆ. ಆದ್ದರಿಂದ, ಮುಸ್ಲಿಮರು ಈ ದೇಶದ್ರೋಹಿ ಮಹಿಳೆಯನ್ನು ಶಿಕ್ಷಿಸಿದರು. (ಝಿಯಾ-ಉಲ್-ನಬಿ(ಸ), ಪೀರ್ ಮುಹಮ್ಮದ್ ಅಕ್ರಂ ಶಾ ಅಲ್-ಅಝಾರಿ, ಸಂಪುಟ-4, ಪುಟ-121, ತಖ್ಲೀಕ್ ಮರ್ಕಝ್ ಪ್ರಿಂಟರ್ಸ್ ಲಾಹೋರ್ 1420ಹಿ ನಂದ ಪ್ರಕಟಿಸಲಾಗಿದೆ)

ಇದಕ್ಕೆ ಎರಡನೇ ಕಾರಣವೆಂದರೆ ಹಝ್ರತ್ ಝೈದ್ ಬಿನ್ ಹಾರಿಸ(ರ) ಅವರು ವ್ಯಾಪಾರದ ಉದ್ದೇಶಕ್ಕಾಗಿ ಸಿರಿಯಾಕ್ಕೆ ತೆರಳಿದರು. ಅವರ ಬಳಿ ಇತರ ಸಹಾಬರವರ ವ್ಯಾಪಾರ ಸಾಮಗ್ರಿಗಳಿದ್ದವು. ಅವರು ಅಲ್-ಕುರಾ ಕಣಿವೆಯನ್ನು ತಲುಪಿದಾಗ, ಫಜಾರಾ ಗೋತ್ರದ ಬನು

ಬದ್ರ್ ಶಾಖೆಯ ಅನೇಕ ಪುರುಷರು ಹೊರಬಂದರು. ಅವರು ಹಝ್ರತ್ ಝೈದ್ ಮತ್ತು ಅವರ ಸಹಚರರನ್ನು ತೀವ್ರವಾಗಿ ಹೊಡೆದರು ಮತ್ತು ಅವರ ಎಲ್ಲಾ ವಸ್ತುಗಳನ್ನು ಕಸಿದುಕೊಂಡರು. ಅವರು ಹಿಂತಿರುಗಿ ಪ್ರವಾದಿಯವರಿಗೆ ಘಟನೆಯನ್ನು ವರದಿ ಮಾಡಿದರು. ಆಗ ಪ್ರವಾದಿ(ಸ)ರವರು ಒಂದು ಸೈನ್ಯವನ್ನು ಸಿದ್ಧಗೊಳಿಸಿ ಅವರೊಂದಿಗೆ ಆ ಲೂಟಿಗಾರರನ್ನು ವಿಚಾರಿಸಲು ಕಳುಹಿಸಿದರು. (ಝಿಯಾ-ಉಲ್-ನಬಿ, ಪೀರ್ ಮುಹಮ್ಮದ್ ಅಕ್ರಮ್ ಶಾ ಅಲ್-ಅಝ್ಹರಿ, ಸಂಪುಟ-4, ಪುಟ-120, ಜಿಯಾ-ಉಲ್-ಖುರ್‌ಆನ್ ಪಬ್ಲಿಕೇಷನ್ಸ್ ಲಾಹೋರ್)

ಉಮ್ಮ್ ಖಿರ್ಫಾ ಅವರ ಪುತ್ರಿ ಉಮ್ಮ್ ಝಿಮ್ಮಲ್ ಸಲ್ಮಾ ಅವರ ಘಟನೆ ಏನೆಂದರೆ, ಬುಝಾಖಾದಲ್ಲಿ ಹಝ್ರತ್ ಖಾಲಿದ್ ಬಿನ್ ವಲೀದ್ ನಿಂದ ಸೋಲಿಸಲ್ಪಟ್ಟ ಘಾತ್ಫಾನ್, ತೈ, ಸುಲೈಮ್ ಮತ್ತು ಹವಾಝಿನ್ ಜನರು ಉಮ್ಮ್ ಝಿಮ್ಲ್ ಸಲ್ಮಾ ಬಿಂತ್ ಮಲಿಕ್ ಅವರ ಬಳಿಗೆ ಓಡಿಹೋದರು ಮತ್ತು ಅವರೊಂದಿಗೆ ಒಟ್ಟಾಗಿ ವಾಗ್ದಾನ ನೀಡಿದರು, ಅವರು ಮುಸ್ಲಿಮರ ವಿರುದ್ಧ ಹೋರಾಡುವಾಗ ತಮ್ಮ ಪ್ರಾಣವನ್ನು ತ್ಯಾಗ ಮಾಡುತ್ತಾರೆ ಹಿಂದೆ ಸರಿಯುವುದಿಲ್ಲ ಎಂದು. (ಸೀರತ್ ಸಯ್ಯದುನಾ ಸಿದ್ದೀಖ್ ಅಕ್ಬರ್(ರ), ಮನ್ಸೂಬ ಉಸ್ತಾದ್ ಉಮರ್ ಅಬುನ್ನಸರ್, ಪುಟ-610, ಮುಶ್ತಾಕ್ ಬುಕ್ ಕಾರ್ನರ್ ಉರ್ದು ಬಜಾರ್ ಲಾಹೋರ್)

ಘತ್ಫಾನ್‌ನ ಸೋತ ಜನರು ಝುಫರ್‌ನಲ್ಲಿ ಒಟ್ಟುಗೂಡಿದರು. ಝುಫರ್ ಬಸ್ರಾ ಮತ್ತು ಮದೀನಕ್ಕೆ ಹೋಗುವ ಮಾರ್ಗದಲ್ಲಿದೆ. ಇದು ಹೌಅಬ್‌ನ ಸಮೀಪವಿರುವ ಸ್ಥಳವಾಗಿದೆ. ಮದೀನಾ ಮತ್ತು ಬಸ್ರಾ ಮಾರ್ಗದಲ್ಲಿ ಹೌಅಬ್ ಕೂಡ ಒಂದು ಸ್ಥಳವಾಗಿದೆ ಮತ್ತು ಅಲ್ಲಿ ಒಂದು ಬಾವಿ ಇದೆ. ಅಲ್ಲಿ ಉಮ್ಮ್ ಝಿಮಾಲ್ ಸಲ್ಮಾ ಅವರು ಅಲ್ಲಿನ ಜನರು ತಮ್ಮ ಸೋಲಿನ ಬಗ್ಗೆ ಲಜ್ಜೆ ಪಡುವಂತೆ ಮಾಡಿದಳು ಮತ್ತು ಯುದ್ಧಕ್ಕೆ ಆದೇಶಿಸಿದಳು ಮತ್ತು ನಂತರ ಅವಳು ಸ್ವತಃ ವಿವಿಧ ಗೋತ್ರಗಳನ್ನು ಸುತ್ತಿ ಅವರನ್ನು ಹಝ್ರತ್ ಖಾಲಿದ್(ರ) ಅವರ ವಿರುದ್ಧ ಯುದ್ಧವಾಡಲು ಪ್ರಚೋದಿಸಿದಳು ಹೀಗೆ ಅವರು ಯುದ್ಧಕ್ಕೆ ಧೈರ್ಯಶಾಲಿಯಾದರು.

ಇವಳು ಮುಸ್ಲಿಮರ ವಿರುದ್ಧ ಯುದ್ಧವನ್ನು ಪ್ರಚೋದಿಸಲು ಹೊರಡಿದಳು ಮತ್ತು ದಾರಿತಪ್ಪಿದ ಎಲ್ಲಾ ಜನರು ಎಲ್ಲಾ ಕಡೆಯಿಂದ ಅವಳ ಬಳಿ ಬಂದರು. ಇದಕ್ಕು ಮುಂಚೆ ಉಮ್ಮ್ ಖಿರ್ಫಾಳ ಜೀವನದಲ್ಲಿ, ಈ ಉಮ್ಮ್ ಝಿಮ್ಲ್ ಸಲ್ಮಾ ಬಂಧಿಯಾಗಿ ಹಝ್ರತ್ ಆಯಿಷ(ರ) ಅವರನ್ನು ಭೇಟಿಯಾಗಿದ್ದಳು. ಅವರು ಅವಳನ್ನು ಸ್ವತಂತ್ರಗೊಳಿಸಿದರು. ಇವಳು ಕೆಲಕಾಲ ಅವರ ಬಳಿಯೇ ಇದ್ದು ನಂತರ ಅವಳ ಖೌಮಿನ ಕಡೆಗೆ ಮರಳಿ ಹೋಗಿ ನಂತರ ಧರ್ಮಭ್ರಷ್ಟಳಾದಳು.

(ಅಲ್-ಕಾಮಿಲ್ ಫಿ ಅಲ್-ತಾರಿಖ್, ಸಂಪುಟ-2, ಪುಟ-211, ಜಿಕ್ರ್ ರದ್ದಾ ಬನ ಅಮೀರ್, ವ ಹವಾಝಿನ್ ವ ಸಲೀಮ್, ಅಲ್-ಕಿತಾಬ್ ಅಲ್-ಅಲಮಿಯಾ 2003 ರಿಂದ ಪ್ರಕಟಿಸಲಾಗಿದೆ) (ಅಲ್-ಮುಜಾಮ್ ಅಲ್-ಬಲ್ದನ್, ಸಂಪುಟ-4, ಪುಟ-68, ಸಂಪುಟ-2, ಪುಟ-360)

ಹಝ್ರತ್ ಖಾಲಿದ್(ರ) ಅವರಿಗೆ ಈ ಬಗ್ಗೆ ಮಾಹಿತಿ ನೀಡಿದಾಗ, ಅವರು ಅಪರಾಧಿಗಳನ್ನು ಬಂಧಿಸುವಲ್ಲಿ, ಝಕಾತ್ ವಸೂಲಿಯಲ್ಲಿ, ಜನರನ್ನು ಇಸ್ಲಾಂಗೆ ಆಹ್ವಾನಿಸುವಲ್ಲಿ ಮತ್ತು ಜನರನ್ನು ಸಮಾಧಾನಪಡಿಸುವಲ್ಲಿ ನಿರತರಾಗಿದ್ದರು. ಆದ್ದರಿಂದ ಹಝ್ರತ್ ಖಾಲಿದ್(ರ) ಅವರು ಉಮ್ಮ್ ಝಿಮ್ಲ್ ಸಲ್ಮಾ ಮತ್ತು ಅವರ ಸಂಗಡಿಗರೊಂದಿಗೆ ಯುದ್ಧವಾಡಲು ಮುಂದಾದರು. ಭೀಕರ ಯುದ್ಧ ನಡೆಯಿತು. ಆ ಸಮಯದಲ್ಲಿ ಉಮ್ಮ್ ಝಿಮ್ಲ್ ಸಲ್ಮಾ ತನ್ನ ತಾಯಿಯ ಒಂಟೆಯ ಮೇಲೆ ತನ್ನ ತಾಯಿಯಂತೆ ಅತ್ಯಂತ ಘನತೆಯಿಂದ ಸವಾರಿ ಮಾಡುತ್ತಿದ್ದಳು ಮತ್ತು ಎರಡು ಸೈನ್ಯಗಳ ನಡುವೆ ಘೋರ ಯುದ್ಧವು ನಡೆಯಿತು. ಉಮ್ಮ್ ಝಿಮ್ಲ್, ಒಂಟೆಯ ಮೇಲೆ ಸವಾರಿ ಮಾಡುತ್ತಿದ್ದು, ತನ್ನ ಪ್ರಚೋದನಕಾರಿ ಭಾಷಣಗಳಿಂದ ಸೈನ್ಯವನ್ನು ಕೆರಳಿಸುತ್ತಿದ್ದಳು. ಧರ್ಮಭ್ರಷ್ಟರೂ ಬಹಳ ಶೌರ್ಯದಿಂದ ಹೋರಾಡುತ್ತಿದ್ದರು. ಉಮ್ಮ್ ಝಿಮ್ಲ್ ಅವಳ ಒಂಟೆಗಳು ಒಂಟೆಗಳಿಂದ ಸುತ್ತುವರಿದಿದ್ದವು, ಅವುಗಳು ಕೆಚ್ಚೆದೆಯ ಯೋಧರಿಂದ ಸವಾರಿ ಮಾಡಲ್ಪಟ್ಟವು ಮತ್ತು ಉಮ್ಮ್ ಝಿಮ್ಲ್ ಅನ್ನು ಬಹಳ ಎಚ್ಚರಿಕೆಯಿಂದ ರಕ್ಷಿಸುತ್ತಿದ್ದವು. ಮುಸ್ಲಿಂ ರಾಜಕುಮಾರರು ಉಮ್ ಝಿಮ್ಲ್ ಅನ್ನು ತಲುಪಲು ಪ್ರಯತ್ನಿಸಿದರು ಆದರೆ ಆಕೆಯ ಅಂಗರಕ್ಷಕರು ಪ್ರತಿ ಬಾರಿಯೂ ಅವಳನ್ನು ಹಿಮ್ಮೆಟ್ಟಿಸಿದರು. ನೂರು ಜನರನ್ನು ಕೊಂದ ನಂತರ, ಮುಸ್ಲಿಮರು ಅಂತಿಮವಾಗಿ ಉಮ್ಮ್ ಝಿಮ್ಲ್ ಅವಳ ಒಂಟೆಯ ಹತ್ತಿರ ಬಂದರು. ಅವರು ಅಲ್ಲಿಗೆ ತಲುಪಿ ಸವಳ ಒಂಟೆಯ ಗೊರಸುಗಳನ್ನು ಕತ್ತರಿಸಿ ಉಮ್ಮ್ ಝಿಮ್ಲ್ ಅನ್ನು ಕೊಂದರು. ಅವನ ಒಡನಾಡಿಗಳು ಅವನ ಒಂಟೆ ಬಿದ್ದು ಸಾಯುವುದನ್ನು ನೋಡಿದಾಗ, ಅವರ ಧೈರ್ಯವು ಪ್ರತಿಕ್ರಿಯಿಸಿತು ಮತ್ತು ಅವರು ದಿಗ್ಭ್ರಮೆಗೊಂಡು ಯುದ್ಧಭೂಮಿಯಿಂದ ಓಡಿಹೋದರು. ಹೀಗೆ ದೇಶದ್ರೋಹದ ಬೆಂಕಿ ಕಡಿಮೆಯಾಯಿತು ಮತ್ತು ಅರೇಬಿಯದ ಈಶಾನ್ಯ ಭಾಗದಲ್ಲಿ ಧರ್ಮಭ್ರಷ್ಟತೆ ಮತ್ತು ಬಂಡಾಯವು ಕೊನೆಗೊಂಡಿತು. (ಹಝ್ರತ್ ಅಬುಬಕರ್ ಸಿದ್ದಿಖ್(ರ), ಮೊಹಮ್ಮದ್ ಹುಸೇನ್ ಹೈಕಲ್, ಉರ್ದು ಅನುವಾದ, ಪುಟಗಳು 156-157, ಬುಕ್ ಕಾರ್ನರ್ ಜ್ಹೇಲಮ್)

ಹಝ್ರತ್ ಖಾಲಿದ್(ರ) ಅವರು ಈ ವಿಜಯದ ಶುಭವಾರ್ತೆಯನ್ನು ಹಝ್ರತ್ ಅಬುಬಕರ್(ರ) ಅವರಿಗೆ ಕಳುಹಿಸಿದರು. (ತಾರಿಖ್ ಅಲ್-ತಬರಿ, ಸಂಪುಟ-2, ಪುಟ-265, ದಾರ್ ಅಲ್-ಕಿತಾಬ್ ಅಲ್-ಅಲಮಿಯಾ ಲೆಬನಾನ್ 2012)

ಹಝ್ರತ್ ಅಬೂಬಕರ್(ರ)ರ ಪ್ರಸ್ತಾಪ ಮುಂದುವರೆಯುವುದು. ಇನ್ಶಾ ಅಲ್ಲಾಹ್.

ಈಗ ನಾನು ಎರಡು ದಿವಂಗತರ ಬಗ್ಗೆಯೂ ಪ್ರಸ್ತಾಪಿಸುವೆನು. ಜುಮಾದ ನಂತರ ಅವರ ಜನಾಝ ನಿರ್ವಹಿಸುವೆನು.

ಮೊದಲ ಪ್ರಸ್ತಾಪ ಸಿಯಾಲ್‌ಕೋಟಿನ ರಫೀಕ್ ಅಹ್ಮದ್ ಬಟ್ ಸಾಹಿಬ್‌ರ ಪತ್ನಿಯಾದ ಸಾಬಿರ ಬೇಗಂ ಸಾಹಿಬರದ್ದಾಗಿದೆ. ಕೆಲವು ದಿನಗಳಿಗೆ ಮುಂಚೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ಅವರ ಮಗ ಅವರ ಬಗ್ಗೆ ಬರೆಯುತ್ತಾರೆ: ಐದು ಹೊತ್ತಿನ ನಮಾಝ್ ನಿರ್ವಹಿಸುವ, ತಹಜ್ಜುದ್ ಅನುಷ್ಠಿಸುವ, ಅತಿಥಿ ಸತ್ಕಾರ ಮಾಡುವ, ದುಆ ಮಾಡುವ, ಬಡವರಿಗೆ ನೆರವಾಗುವ, ಸಾತ್ವಿಕ ಮಹಿಳೆಯಾಗಿದ್ದರು. ಖಿಲಾಫತಿನೊಂದಿಗೆ ಆಳವಾದ ಸಂಬಂಧ ಮತ್ತು ವಿಶ್ವಾಸವನ್ನು ಹೊಂದಿದ್ದರು. ನಿಯತವಾಗಿ ಖುತ್ಬಗಳನ್ನು ಆಲಿಸುತ್ತಿದ್ದರು. ವಖ್ಫೇ ಝಿಂದಗಿಯರನ್ನು ಬಹಳ ಗೌರವಿಸುತ್ತಿದ್ದರು. ಅವರ ಮಗನಾದ ನಸೀಂ ಬಟ್ ಸಾಹಿಬ್‌ರು ನೈಜೀರಿಯದ ಕಯೂನದಲ್ಲಿ ಮುಬಲ್ಲಿಗ್ ಆಗಿರುವರು. ಕರ್ಮ ಮೈದಾನದಲ್ಲಿ ಇರುವ ಕಾರಣದಿಂದ ತನ್ನ ತಾಯಿಯ ಜನಾಝದಲ್ಲಿ ಭಾಗಿಯಾಗಲು ಅವರಿಗೆ ಸಾಧ್ಯವಾಗಲಿಲ್ಲ. ಅವರ ಪೂರ್ಣ ಕುಟುಂಬ, ಎಂದರೆ, ಪತಿ, ಮಕ್ಕಳು ಮತ್ತು ಮೊಮ್ಮಕ್ಕಳು ಜಮಾಅತಿನ ಸೇವೆಯಲ್ಲಿ ಮುಂದಿರುವರು.

ಮುಂದಿನ ಜನಾಝ ರಶೀದ್ ಅಹ್ಮದ್ ಬಾಜ್ವ ಸಾಹಿಬ್‌ರ ಪತ್ನಿಯಾದ ಸುರಯ್ಯ ರಶೀದ್ ಸಾಹಿಬರದ್ದಾಗಿದೆ. ಎಪ್ರಿಲ್ 20ರಂದು ಕೆನಡದಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ಇವರು ಬಹಳ ಸಾತ್ವಿಕ, ಭಕ್ತಿಯುಳ್ಳ, ಬಡವರಿಗೆ ನೆರವಾಗುವ, ಅತಿಥಿ ಸತ್ಕಾರ ಮಾಡುವ, ಸ್ನೇಹಮಯಿ ಮಹಿಳೆಯಾಗಿದ್ದರು. ದೀರ್ಘಕಾಲದ ವರೆಗೆ ತನ್ನ ಪ್ರದೇಶದಲ್ಲಿ ಲಜ್ನ ಸದರ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದಿದ್ದರು. ಬಹಳ ಹೆಚ್ಚಾಗಿ ಮಕ್ಕಳಿಗೆ ಪವಿತ್ರ ಖುರ್‌ಆನ್ ಕಲಿಸಲು ಅವರಿಗೆ ಸೌಭಾಗ್ಯ ಲಭಿಸಿತು. ಅನಂತರ ಮಕ್ಕಳ ಶಿಕ್ಷಣ ಮತ್ತು ತರಬೇತಿಗಾಗಿ ತನ್ನ ಎಲ್ಲವನ್ನು ಮಾರಾಟ ಮಾಡಿಕೊಂಡು ರಬ್ವಗೆ ಬಂದರು. ದಿವಂಗತರು ಮೂಸಿಯಾಗಿದ್ದರು. ಅವರ ಒಬ್ಬ ಪುತ್ರನಾದ ಸಫೀರ್ ಬಾಜ್ವ ರಬ್ವದಲ್ಲಿ ಮುಬಲ್ಲಿಗ್ ಆಗಿರುವರು. ಅವರಿಗೆ ಜನಾಝದಲ್ಲಿ ಭಾಗಿಯಾಗಲು ಸಾಧ್ಯವಾಗಲಿಲ್ಲ. ಒಬ್ಬ ಪುತ್ರಿಯೂ ಮುಬಲ್ಲಿಗ್‌ರ ಪತ್ನಿಯಾಗಿರುವರು.

ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಸಂತಾನ ಪರಂಪರೆಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

***********

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಮುಸಲ್ಮಾನರೆಂದು ಹೇಳಿಕೊಳ್ಳುವವರು ನನ್ನ ಕುರಿತು ಸಂಶಯದಲ್ಲಿದ್ದಾರೆ. ಏಕೆ ಯಾವನೇ ಒಬ್ಬ ಪಾದರಿ ನನ್ನೊಡನೆ ಪ್ರತಿಪಾದಿಸಲು ತಯಾರು ಮಾಡುತ್ತಿಲ್ಲ. ಯಾರೇ ಪಾದರಿ ಅಥವಾ ಹಿಂದೂ ಪಂಡಿತನಿಗೆ ಹೇಳಿರಿ. ಈ ವ್ಯಕ್ತಿ ಸುಳ್ಳುಗಾರನಾಗಿದ್ದಾನೆ. ಇವನ ಜೊತೆ ಪ್ರತಿಪಾದಿಸುವುದರಲ್ಲಿ ಯಾವ ನಷ್ಟವು ಇಲ್ಲ. ನಾವು ಜವಾಬ್ದರರಾಗಿದ್ದೇವೆ. ಅಲ್ಲಾಹನು ಯಾವುದೇ ನಿರ್ಣಯ ಮಾಡಿ ತೋರಿಸಲಿ, ಹೀಗಿದ್ದರೆ ನಾನು ರಾಜಿಯಾಗುತ್ತೇನೆ. ನನ್ನ ಎಷ್ಟೆಲ್ಲ ಲೌಕಿಕ ಆಸ್ತಿಗಳಿವೆಯೋ ಅಂದರೆ ಭೂಮಿ ಇತ್ಯಾದಿ. ನನ್ನ ಆಸ್ತಿಯಾಗಿದ್ದು ನಾನು ಸುಳ್ಳುಗಾರನೆಂದು ಸಾಬೀತಾದರೆ ಅದೆಲ್ಲ ಪಾದರಿ ಅಥವ ಪಂಡಿತನಿಗೆ ಒಪ್ಪಿಸುವೆನು. ಅವರ ಸುಳ್ಳು ಬಹಿರಂಗಗೊಂಡರೆ ಇಸ್ಲಾಮ್ ಧರ್ಮ ಸ್ವೀಕೃತಿಯ ಹೊರತು ಏನು ಅವರಿಂದ ಬೇಡುವುದಿಲ್ಲ. ಈ ಮಾತು ನಾನು ದೃಢ ನಿಮಿತ್ತದಿಂದ ಹೇಳುತ್ತಿದ್ದೇನೆ. ಮತ್ತು ಮನಃಪೂರ್ವಕವಾಗಿ ವಿವರಿಸುತ್ತಿದ್ದೇನೆ. ಮತ್ತು ಅಲ್ಲಾಹ ಆಣೆ ನಾನು ಅವರನ್ನು ಎದುರಿಸಲು ಸಿದ್ಧನಿದ್ದೇನೆ. ಮತ್ತು ಜಾಹೀರಾತು ನೀಡಲು ಸಿದ್ಧ. ಬದಲು ನಾನಂತೂ ಈಗಾಗಲೇ ಹನ್ನೆರಡು ಸಾವಿರ ಜಾಹಿರಾತು

ಪ್ರಕಟಿಸಿದ್ದೇನೆ. ಕರೆ ನೀಡುತ್ತಾ ನೀಡುತ್ತಾ ದಣಿದಿದ್ದೇನೆ. ಆದರೆ ಯಾವ ಪಂಡಿತರಾಗಲಿ, ಫಾದರಿಯಾಗಲಿ ಸತ್ಯವನ್ನು ತಿಳಿಯಲು ಮುಂದೆ ಬಂದಿಲ್ಲ. ನನ್ನ ಸತ್ಯತೆಗೆ ಇದಕ್ಕಿಂತ ಮಿಗಿಲಾದ ಪುರಾವೇ ಏನಿದೆ. ನಾನು ಪ್ರತಿಪಾದಿಸಲು ಸದಾ ಸಿದ್ಧ. ನನ್ನ ಎದುರಿಗೆ ಯಾವುದೆ ದೃಷ್ಟಾಂತ ತೋರಿಸುವ ದಾವೆ ಮಾಡದಿದ್ದರೂ ಪಂಡಿತ ಅಥವ ಪಾದರಿಯೊಬ್ಬರು ಕೇವಲ ಪತ್ರಿಕೆಯ ಮೂಲಕ ಪ್ರಕಟಪಡಿಸಲಿ. ನಾನು ಏಕಪಕ್ಷೀಯವಾಗಿ ಯಾವುದಾದರೊಂದು ಅಸಾಧಾರಣ ದೃಷ್ಟಾಂತ ನೋಡಲು ಸಿದ್ಧನಿದ್ದೇನೆ ಎಂದು. ಅದು ಬಹಿರಂಗಗೊಂಡಾಗ ನಾನು ಎದುರಿಸಲು ವಿಫಲಗೊಂಡರೆ ತಕ್ಷಣದಿಂದ ಇಸ್ಲಾಂ ಧರ್ಮ ಸ್ವೀಕರಿಸುವೆನು ಎಂದಾದರೆ ನನಗೆ ಈ ವಾದ ಮಂಜೂರಾಗಿದೆ. ಯಾರಾದರೂ ಮುಸ್ಲಿಮರಲ್ಲಿ ಈ ಸಾಹಸ ತೋರಿಸುವಂತಾಗಲಿ ಯಾವ ವ್ಯಕ್ತಿಯನ್ನು ನೀವು ಧರ್ಮಭ್ರಷ್ಟ ಕಾಫಿರ್ ದಜ್ಜಾಲ್ ಎನ್ನುತ್ತೀರಿ. ಫಾದರಿಗಳ ವಿರುದ್ಧ ಸ್ಪರ್ಧೆ ಒಡ್ಡಿ ನೋಡಲಿ, ನೀವು ಕೇವಲ ಪ್ರೇಕ್ಷಕರಾಗಿ ತಮಾಷೆ ನೋಡಿರಿ.

(5) ಐದನೇ ಕುರುಹು ಈ ವಿನೀತನ ಸತ್ಯತೆಯ ಕುರಿತು ಏನೆಂದರೆ ನಾನು ನನ್ನ ದೈವಿಕ ಸ್ವಪ್ನ ಮತ್ತು ದೇವವಾಣಿಯ ಜ್ಞಾನದ ನೆಲೆಯಲ್ಲಿ ಮುಸಲ್ಮಾನರ ಮೇಲೂ ಮೇಲ್ಮೈ ಪಡೆದಿರುತ್ತೇನೆ. ಅವರಲ್ಲಿ ದೇವವಾಣಿಯ ದಾವೆ ಹೊಂದಿರುವವರು ನನ್ನ ಎದುರಿಗೆ ಬರಲಿ ದೈವಿಕ ಪುಷ್ಟಿ ಮತ್ತು ದೈವಿಕ ಅನುಗ್ರಹಗಳಲ್ಲಿ ಮತ್ತು ದೈವಿಕ ದೃಷ್ಟಾಂತಗಳಲ್ಲಿ ನನ್ನ ಮೇಲೆ ಮೇಲ್ಮೈ ಸಾಧಿಸಿದರೆ ಅವರು ಬಯಸಿದಂತೆ ನನ್ನನ್ನು ಝಿಬಹ್ (ಹತ್ಯೆ ಮಾಡಲಿ) ನಾನು ಒಪ್ಪಿಕೊಳ್ಳುತ್ತೇನೆ, ನನಗೆ ಕಾಫಿರ್ ಎಂದು ಹೇಳುವವರು ಅವರೇ ನನ್ನ ಸಂಭೋಧಕರಾಗಿದ್ದಾರೆ. ನನ್ನನ್ನು ಎದುರಿಸಲು ತಾಕತ್ತು ಹೊಂದಿಲ್ಲ ಎಂದಾದರೆ ಬರವಣಿಗೆಯಲ್ಲಿ ಜಾಹೀರಾತು ಪ್ರಕಟಿಸಲಿ. ಅವರು ಅಸಾಧಾರಣವಾದ ಪವಾಡ ನನ್ನಲ್ಲಿ ಕಂಡರೆ ಚಾಚೂ ತಪ್ಪದೆ ನನ್ನ ದಾವೆಯನ್ನು ಸ್ವೀಕರಿಸಲಿ. ನಾನು ಈ ಕಾರ್ಯಾರ್ಕ್ಕಾಗಿ ಹಾಜರಿದ್ದೇನೆ. ನನ್ನ ಪ್ರಭೂ ದಯಾಳುವಾದ ಅಲ್ಲಾಹನು ನನ್ನ ಜೊತೆಗಿದ್ದಾನೆ. ಆದರೆ ಈ ಸ್ಪರ್ಧೆ ಅಯಿಮ್ಮತುಲ್ ಕಫ್ರ್ (ಕಾಫಿರ್ ಎಂದು ಫತ್ವಾ ಹೊರಡಿಸುವವರ ಮಿಥ್ಯೆ ಮಾತ್ರ) ಎಂದು ದೇವಾಜ್ಞೆಯಿದೆ. ಅವರೊಡನೆಯೇ ಈ ಸ್ಪರ್ಧೆಯಿದೆ. ಅವರು ಬೇಕಾದರೆ ಎದುರಿಗೆ ಬರಬಹುದು. ಆದರೆ ನೆನಪಿರಲಿ. ಅವರು ಎದುರಿಗೆ ಖಂಡಿತವಾಗಿಯೂ ಬರಲಾರರು. ಏಕೆಂದರೆ ಸತ್ಯದ ಪ್ರತಾಪ ಅವರ ಮೇಲಿದೆ ಮತ್ತು ಅವರು ತನ್ನ ದೌರ್ಜನ್ಯ ಪೀಡೆಯ ಕುರಿತು ಅರಿತಿದ್ದಾರೆ. ಆದುದರಿಂದ ಖಂಡಿತವಾಗಿಯೂ ಅವರು ಎದುರಿಗೆ ಬರಲಾರರು. ಆದರೆ ನನ್ನ ಕಡೆಯಿಂದ ಅತಿ ಶೀಘ್ರದಲ್ಲಿ "ದಾಫೆಉಲ್ ವಸಾವಿಸ್" ಗ್ರಂಥದಲ್ಲಿ ಅವರ ಹೆಸರುಗಳನ್ನು ಪ್ರಕಟಿಸಲಿದ್ದೇನೆ.

ಜನಸಾಮಾನ್ಯರು ಅವರು ಇಮಾಮರು ಅಲ್ಲ, ಮತಪಂಡಿತರು ಅಲ್ಲ ಮತ್ತು ಅವರು ಯಾವ ಫತ್ವಾ ಹೊರಡಿಸಲಿಲ್ಲ. ಅವರಿಗಾಗಿ ನನ್ನೊಂದಿಗೆ ಆಜ್ಞೆಯಿದೆ. ಅವರು ಪವಾಡವನ್ನು ನೋಡಬಯಸುವುದಾದರೆ ನನ್ನ ಸಂಗತಿಯಲ್ಲಿ ಇರಲಿ, ಅಲ್ಲಾಹ್ ನಿರಪೇಕ್ಷನು ನಯ, ವಿನಯ, ನಿಷ್ಠೆ ಕಾಣುವವನೆಡೆ ವಾಲುವುದಿಲ್ಲ. ಆದರೆ ಅವನು ಈ ವಿನೀತನನ್ನು ವ್ಯರ್ಥಗೊಳಿಸುವುದಿಲ್ಲ ಮತ್ತು ತನ್ನ ನ್ಯಾಯಪೂರ್ತಿಕರಣ ಮಾಡಿಯೇ ಸಿದ್ಧನಾಗುವುದು. ತಡಮಾಡದೇ ತನ್ನ ದೃಷ್ಟಾಂತಗಳನ್ನು ತೋರಿಸುವನು, ಆದರೆ ದೃಷ್ಟಾಂತವನ್ನು ನೋಡುವ ಮುಂಚೆಯೇ ಸ್ವೀಕರಿಸುವವರು ಧನ್ಯರು, ಅವರು ಅಲ್ಲಾಹನ ಪ್ರೀತಿಯ ದಾಸರಲ್ಲಿ ಸೇರುವರು. ಮತ್ತು ಸತ್ಯವಂತರು ಅವರಲ್ಲಿ ಯಾವ ಮೋಸಗಾರಿಕೆ ಇಲ್ಲ ಎಂದಾಯಿತು. ದೃಷ್ಟಾಂತ ಬೇಡುವವರು ವ್ಯಥೆ ಪಡುವವರು ನಮಗೆ ಆ ಸಜ್ಜನರ ರೀತಿಯಲ್ಲಿ ಅವರು ಯಾವ ದೃಷ್ಟಾಂತವನ್ನು ಬೇಡಲಿಲ್ಲ. ಆದರೆ ಅಲ್ಲಾಹನ ಸಂತೃಪ್ತಿ ಸಾನಿಧ್ಯ ಪಡೆದರು. ನಮಗೆ ಅ ಭಾಗ್ಯ ದೊರೆಯಲಿಲ್ಲವಲ್ಲ.

ಆದುದರಿಂದ ಈ ಮಾತು ನೆನಪಿಡಬೇಕು. ಅಲ್ಲಾಹನು ಈ ಸಂಘಟನೆಯನ್ನು ಸಾಕ್ಷರಹಿರನ್ನಾಗಿ ಬಿಡುವುದಿಲ್ಲ. ಅವನು ಸ್ವಯಂ ಹೇಳಿದನು. ಅದು ಬರಾಹೀನೇ ಅಹ್ಮದಿಯಾದಲ್ಲಿ ಬರೆಯಲ್ಪಟ್ಟಿದೆ. "ಲೋಕದಲ್ಲಿ ಒಬ್ಬ ಮುನ್ನೆಚ್ಚರಿಕೆಗಾರನು ಬಂದನು. ಅದರೆ ಲೋಕವು ಅವನನ್ನು ಸ್ವೀಕರಿಸಲಿಲ್ಲ. ಆದರೆ ಅಲ್ಲಾಹನು ಅವನನ್ನು ಸ್ವೀಕರಿಸುವನು. ಮತ್ತು ಪ್ರಬಲ ಆಕ್ರಮಣಗಳ ಮೂಲಕ ಅವನ ಸತ್ಯತೆ ಬಹಿರಂಗಪಡಿಸುವನು' ಯಾವ ಜನರು ಧಿಕ್ಕರಿಸಿದರು ಮತ್ತು ಧಿಕ್ಕರಿಸಲು ಸಿದ್ಧರಾದವರು ಅವರಿಗಾಗಿ ಅಪಮಾನ ಪರಾಜಯ ಕಾದಿದೆ. ಅವರು ಇಷ್ಟಾದರೂ ಯೋಚಿಸಲಿಲ್ಲ. ಇದು ಮಿತ್ಯವಾಗಿರುತ್ತಿದ್ದರೆ ನಾನು ಎಂದೋ ನಾಶವಾಗುತ್ತಿದ್ದೆ ಏಕೆಂದರೆ ಅಲ್ಲಾಹನು ಸುಳ್ಳುಗಾರರ ಶತ್ರುವಾಗಿದ್ದಾನೆ. ಆ ಮೂಢರು ಇಷ್ಟು ಭಾವಿಸುವುದಿಲ್ಲ. ಇಂತಹ ದೃಢತೆ ಮತ್ತು ಸಾಹಸ ಯಾವನೇ ಸುಳ್ಳುಗಾರನಿಗೆ ಲಭಿಸುತ್ತದೆಯೇ. ಆ ಮೂರ್ಖರು ಇದು ಸಹ ಅರಿಯುವುದಿಲ್ಲ. ಯಾವ ವ್ಯಕ್ತಿ ಅಗೋಚರ ಶಕ್ತಿಯಿಂದ ಶಕ್ತಿ ಪಡೆದು ವಾದಿಸುತ್ತಿದ್ದಾನೆ. ಅವನ ಮಾತುಗಳಲ್ಲಿ ವಿಶೇಷವಾದ ಘನತೆ ಪ್ರತಾಪವಿದೆ. ಒಬ್ಬಂಟಿಯಾಗಿ ಲೋಕವನ್ನೇ ಎದುರಿಸುವ ಎದೆಗಾರಿಕೆ ಅವನಿಗೆ ಲಭಿಸಿದೆ. ನಿಶ್ಚಯವಾಗಿಯೂ ನೀವು ಕಾಯುತ್ತೀರಿ. ಆ ದಿನಗಳು ಬರುತ್ತಿವೆ. ಬದಲು ಅತ್ಯಂತ ಸಮೀಪದಲ್ಲಿವೆ. ಶತ್ರುಗಳು ಪರಾಜಿತರಾಗುವರು ಮತ್ತು ಮಿತ್ರರು ವಿಜಯಿಗಳಾಗುವರು. ಯಾರು ಮಿತ್ರರು? ದೃಷ್ಟಾಂತಗಳನ್ನು ಅನುಭಸದೇ ಸ್ವೀಕರಿಸಿದವರು ನನ್ನ ಮಿತ್ರರು. ಸಾವಿರಾರು ದೃಷ್ಟಾಂತಗಳ ಅನುಭವ ಪಡೆದವರ ರೀತಿಯಲ್ಲಿ ತಮ್ಮ ಜೀವ ಸಂಪತ್ತು ಮೌನ, ತ್ಯಾಗ ಮಾಡಿದವರೇ ನನ್ನ ಮಿತ್ರರು. ಅದುವೆ ನನ್ನ ಜಮಾಅತ್ (ಸಂಘಟನೆ) ಅವರೇ ನನ್ನವರು. ನನ್ನನ್ನು ಒಬ್ಬಂಟಿಯಾಗಿ ಕಂಡರು ಮತ್ತು ನನಗೆ ಸಹಕರಿಸಿದರು. ನನ್ನನ್ನು ದುಃಖದಲ್ಲಿ ಕಂಡರು ಮತ್ತು ನನ್ನ ದುಃಖದಲ್ಲಿ ಭಾಗಿಯಾದರು. ಅಜ್ಞಾತರಾಗಿಯೂ ಜ್ಞಾನವಂತರಂತೆ ನನ್ನನ್ನು ಆಧರಿಸಿದರು. ಅಲ್ಲಾಹನ ಅನುಗ್ರಹಗಳು 'ಅವರ ಮೇಲಿರಲಿ." (ಅದೇ ಪುಟ 347–349)

ಮುಂದೆ ಇನ್‌ಶಾಅಲ್ಲಾಹ್ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರಿಂದ ಪ್ರಸ್ತುತ ಪುಟ ಇನ್ನೊಂದು ಬಹುಮಾನದ ಪಂಥಹ್ವಾನ ನಾವು ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್‌ಸೂರ್ ಅಹ್ಮದ್ ಮಸ್‌ರೂರ್)**

**ಪ್ರಪಂಚದ ಭಿನ್ನಾಭಿಪ್ರಾಯಗಳನ್ನು ಅಳಿಸಲು ಖುರ್‌ಆನ್‌ಗಿಂತ ಬೇರೆ ಯಾವುದೇ ಬೋಧನೆಯು ಇಲ್ಲ**
**ಈ ಬೋಧನೆಗಳು ಅಲ್ಲಾಹನ ಕಡೆಯಿಂದ ಬಂದದ್ದು ಎಂದು ಜಗತ್ತಿಗೆ ತಿಳಿದರೆ, ಆಗ ಅವರು ತಮ್ಮ ಆಲೋಚನೆಗಳನ್ನು ತ್ಯಜಿಸುತ್ತಾರೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸೂರತುನ್ನಹಲ್ ಆಯತ್ 65 **ವಮಾ ಅನ್‌ಝಲ್‌ನಾ ಅಲೈಕಲ್‌ಕಿತಾಬ ಇಲ್ಲ ಲಿಯುತಬೈಯನ ಲಹುಮುಲ್ಲಝಿಖ್ತಲಫು ಫೀಹಿ; ವಹುದವ್ವ ರಹ್ಮತಲ್ಲಿ ಖೌಮಿಯ್ಯುಮಿನೂನ್** ನ ವ್ಯಾಖ್ಯಾನ ಮಾಡುತ್ತ ಹೇಳಿದರು:

ದೈವಿಕ ಬೋಧನೆಗಳನ್ನು ಅವತರಿಸುವಿಕೆಯ ಮತ್ತೊಂದು ಅವಶ್ಯಕತೆ ಇದೆ ಅದೇನೆಂದರೆ ಪ್ರಪಂಚದ ಜನರಲ್ಲಿ ನೈತಿಕ ಹಾಗೂ ಧಾರ್ಮಿಕ ವಿಷಯಗಳ ಬಗ್ಗೆ ಭಿನ್ನಭಿಪ್ರಾಯಗಳಿವೆ. ಸರ್ವಶಕ್ತನಾದ ಅಲ್ಲಾಹನಿಂದ ಖಚಿತವಾದ ಜ್ಞಾನವಿಲ್ಲದೆ ಈ ವ್ಯತ್ಯಾಸವನ್ನು ಹೇಗೆ ತೆಗೆದುಹಾಕಬಹುದು? ಆದ್ದರಿಂದ ಈ ಜ್ಞಾನವನ್ನು ನೀಡಲು ಈ ಪುಸ್ತಕ ಅವತರಿಸಿದೆ. ಬೇರೆ ಯಾವ ಶಿಕ್ಷಣವು ಪ್ರಪಂಚದ ಭಿನ್ನಭಿಪ್ರಾಯವನ್ನು ನಿವಾರಿಸಬಲ್ಲದು? ಈ ಬೋಧನೆಗಳು ಸರ್ವಶಕ್ತನಾದ ಅಲ್ಲಾಹನಿಂದ ಬಂದಿದೆ ಎಂದು ಜಗತ್ತಿಗೆ ತಿಳಿದಿದ್ದರೆ ಅವರು ತಮ್ಮ ಆಲೋಚನೆಗಳನ್ನು ತ್ಯಜಿಸುತ್ತಾರೆ, ಅದು ಅಲ್ಲದೆ ಅವರು ಹೇಗೆ ತಮ್ಮ ಆಲೋಚನೆಗಳನ್ನು ತ್ಯಜಿಸುವರು ಏಕೆಂದರೆ ಪ್ರತಿಯೊಬ್ಬರೂ ತಮ್ಮ ಆಲೋಚನೆಗಳಿಗಿಂತ ಇತರರ ಆಲೋಚನೆಗಳಿಗೆ ಆದ್ಯತೆ ನೀಡುತ್ತಾರೆ.

ಮೊದಲ ಪ್ರವಾದಿಯ ನಂತರ ಎರಡನೇ ಪ್ರವಾದಿಯ ಬರುವಿಕೆಯನ್ನು ನೀವು ವಿರೋಧಿಸುತ್ತೀರಿ ಎಂದು ಈ ಆಯತ್ ಸೂಚಿಸುತ್ತದೆ. ಎರಡನೆಯ ಪ್ರವಾದಿ ಬಂದಿರುವುದು ನಿಮ್ಮ ಸ್ವಂತ ಕಾರ್ಯಗಳಿಂದಾಗಿದೆ, ನೀವು ಸತ್ಯವನ್ನು ಬಿಟ್ಟು ಏಕೆ ಭಿನ್ನಭಿಪ್ರಾಯವನ್ನು ಹೊಂದಿದ್ದೀರಿ? ನೀವು ಭಿನ್ನಭಿಪ್ರಾಯ ಮಾಡದಿರುತ್ತಿದ್ದರೆ, ಖಂಡಿತವಾಗಿಯೂ ಪ್ರವಾದಿಯ ಅಗತ್ಯವಿರಲಿಲ್ಲ, ಆದರೆ ನೀವು ರೋಗವನ್ನು ಸೃಷ್ಟಿಸಿದ್ದೀರಿ ಈಗ ಹೇಳುತ್ತಿರುವುದೇನೆಂದರೆ ಅಲ್ಲಾಹನ ಕಡೆಯಿಂದ ಭಿನ್ನಾಭಿಪ್ರಾಯವನ್ನು ದೂರಗೊಳಿಸಲು ಬಂದಿರುವವನ ಅವಶ್ಯಕತೆ ಇಲ್ಲ ಎಂದು.

ಮೇಲೆ ಹೇಳಲಾದ ವಿಷಯದ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಬಹುದು: ಜನರು ಹಝ್ರತ್ ಮೂಸ ಅಲೈಹಿಸ್ಸಲಾಮ್ ಅವರ ಶರೀಯತ್ತನ್ನು ಅನುಸರಿಸುತ್ತಿದ್ದರೆ ಮತ್ತು ಭಿನ್ನಾಭಿಪ್ರಾಯ ಹೊಂದಿಲ್ಲದಿದ್ದರೆ, ಆಗ ಪ್ರವಾದಿ(ಸ) ಮೂಲಕ ಪರಿಪೂರ್ಣ ಶರೀಯತ್ ಅಥವಾ ಪರಿಪೂರ್ಣ ಬೋಧನೆ ಬರುತ್ತಿರಲಿಲ್ಲವೇ? ಅದೊಂದು ಕಾಲ್ಪನಿಕ ಮಾತಾಗಿದೆ ಎಂಬುದು ಉತ್ತರವಾಗಿದೆ. ವಾಸ್ತವವಾಗಿ, ಜನರು ಭಿನ್ನಾಭಿಪ್ರಾಯ ಮಾಡುವುದರಿಂದ ದೂರ ನಿಲ್ಲುತ್ತಿರಲಿಲ್ಲ ಮತ್ತು ಈ ಬೋಧನೆಯು ಅವತೀರ್ಣವಾಗಲು ತಡೆಯಾಗುತ್ತಿರಲಿಲ್ಲ. ಆದರೆ ಅದು ಹಾಗೆ ಆಗುತ್ತಿದ್ದರೂ ಅಲ್ಲಾಹನು ಅದರ ಉತ್ತರವು ಹೀಗೆ ನೀಡಿದ್ದಾನೆ **ಲೌಕಾನ ಫಿಲ್ ಅರ್ಝಿ ಮಲಾಇಕತುಯ್ಯಮ್‌ಶೂನ ಮುತ್‌ಮಿನ್ನೀನ ಲನಝ್ಝಲ್‌ನಾ ಅಲೈಹಿಮ್ ಮಿನಸ್ಸಮಾಇ ಮಲಕರ್‌ರಸೂಲ** (ಬನೀ ಇಸ್ರಾಈಲ್: ರುಕು 11) ಭೂಮಿಯಲ್ಲಿ

*(ಪುಟ 11 ರಲ್ಲಿ ಮುಂದುವರಿಸಲಾಗಿದೆ)*

# ಅಲ್ಲಾಹನು ಪವಿತ್ರ ಖುರ್‌ಆನ್‌ನ ರಕ್ಷಕನಾಗಿದ್ದಾನೆ.

**(ಪವಿತ್ರ ಖುರ್‌ಆನ್‌ನ 26 ವಚನಗಳ ಕುರಿತು ಎತ್ತಿದ ಆಕ್ಷೇಪದ ಉತ್ತರ)**

**ಮುಹಮ್ಮದ್ ಹಮೀದ್ ಕೌಸರ್,**
**ನಾಝಿರ್ ದಾವತ್ ಇಲಲ್ಲಾಹ್ ಉತ್ತರ ಭಾರತ, ಖಾದಿಯಾನ್.**

**(ಸಂಚಿಕೆ: 3)**

**(ಆಕ್ಷೇಪಣೆ ಸಂಖ್ಯೆ: 4)** ಹಝ್ರತ್ ಉಸ್ಮಾನ್(ರ)ರವರು ಈ ಖುರ್‌ಆನ್‌ನ ಹೆಸರಿನಲ್ಲಿ ಮಾಡಿದ ಪ್ರತಿಗಳನ್ನು ಸುಡಲು ಆದೇಶಿಸಿದ್ದಾರೆ?

**ಉತ್ತರ:** ಖುರಾನ್‌ನ ಅವತರಣಿಕೆಯು ಆರಂಭದಿಂದಲೂ ಸಹಾಬಿಗಳು ಖುರ್‌ಆನ್ ಅನ್ನು ವೈಯಕ್ತಿಕವಾಗಿ ಬರೆಯುತ್ತಿದ್ದರು ಎಂದು ಇಸ್ಲಾಂನ ಇತಿಹಾಸದಿಂದ ತಿಳಿದುಬಂದಿದೆ ಮತ್ತು ಇದಕ್ಕೆ ಪುರಾವೆ ಹಝ್ರತ್ ಉಮರ್(ರ.ಅ) ನಬುವ್ವತ್(ಪ್ರವಾದಿತ್ವ)ದ ಘೋಷಣೆಯ ನಂತರ ಐದನೇ ಅಥವಾ ಆರನೇಯ ವರ್ಷದಲ್ಲಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಇಸ್ಲಾಂಗೆ ಮತಾಂತರಗೊಳ್ಳುವ ಮೊದಲು, 40 ಪುರುಷರು ಮತ್ತು 11 ಮಹಿಳೆಯರು ಇಸ್ಲಾಂಗೆ ಮತಾಂತರಗೊಂಡಿದ್ದರು. ಅಂದರೆ, ಒಟ್ಟು ಮುಸ್ಲಿಮರ ಸಂಖ್ಯೆ 51 ಆಗಿತ್ತು. (ಮಿಶ್ಕಾತ್ ಅಸ್ಮಾ ಅಲ್-ರಿಜಾಲ್)

ಹಝ್ರತ್ ಉಮರ್(ರ.ಅ) ಪ್ರವಾದಿ(ಸ.ಅ) ರವರನ್ನು ಕೊಲ್ಲಲು ಅವರ ಮನೆಯಿಂದ ಹೊರಗೆ ಹೋಗಿದ್ದರು, ದಾರಿಯಲ್ಲಿ ಯಾರೋ ಒಬ್ಬರು ನಿಮ್ಮ ಸಹೋದರಿ ಫಾತಿಮಾ ಮತ್ತು ನಿಮ್ಮ ಭಾವ ಮುಸ್ಲಿಮರಾಗಿದ್ದಾರೆ ಎಂದು ಹೇಳಿದರು. ಆದ್ದರಿಂದ ಹಝ್ರತ್ ಉಮರ್(ರ) ತನ್ನ ಸಹೋದರಿಗೆ ಹೇಳಿದರು. ನನಗೇ ಈ ಪ್ರತಿಗಳನ್ನು ನೀಡು. (ಸೀರತ್ ಇಬ್ನ್ ಹಿಶಾಮ್, ಅಧ್ಯಾಯ ಇಸ್ಲಾಂ ಉಮರ್ ಬಿನ್ ಖತ್ತಾಬ್ ಪುಟ-41)

ಓದುಗರೇ!! ಖುರ್‌ಆನ್‌ನ ಅವತರಣಿಕೆಯ ಪ್ರಾರಂಭದಲ್ಲಿ ಅದು ಕೇವಲ ಐದನೇ ಅಥವಾ ಆರನೇ ವರ್ಷ ಎಂದು ಪರಿಗಣಿಸಿ, ಅದನ್ನು ಪತ್ರಿಕೆಗಳಲ್ಲಿ ಬರೆಯಲಾಗಿತ್ತು ಅದು ಹಝ್ರತ್ ಉಮರ್(ರ)ರವರ ಸಹೋದರಿಯ ಬಳಿ ಇತ್ತು ಇದರಿಂದ ನಮಗೆ ತಿಳಿದು ಬರುವುದೇನೆಂದರೆ ಇಂತಹ ಅನೇಕ ಸಹಾಬಗಳು ಸಹ ತಮ್ಮ ಬಳಿ ಪತ್ರಿಕೆಗಳಲ್ಲಿ ಖುರ್‌ಆನ್ ಅನ್ನು ಬರೆದಿದ್ದರು.

ಹಝ್ರತ್ ಉಸ್ಮಾನ್(ರ) ತನ್ನ ಖಿಲಾಫತ್ ಅವಧಿಯಲ್ಲಿ ಯೋಚಿಸಿದೇನೆಂದರೆ ಮೂಲತಃ ಅವತರಿಸಿದ ಪವಿತ್ರ ಖುರ್‌ಆನ್ ನಿಜವಾದ ಖುರ್‌ಆನ್ ಆಗಿರಬೇಕು ಮತ್ತು ಉಳಿದ ಎಲ್ಲಾ ಖುರ್‌ಆನ್‌ಗಳು ನಾಶವಾಗಬೇಕು ಎಂದು ಭಾವಿಸಿದರು.

**ದೈವಿಕ ರಕ್ಷಣೆಯ ನಿರಾಕರಿಸಲಾಗದ ಪುರಾವೆ:**

(1) ಪವಿತ್ರ ಖುರ್‌ಆನ್‌ನ ನಿಜವಾದ ಸಂರಕ್ಷಕನಾದ ಅಲ್ಲಾಹನು ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಸ್ಮಾನ್(ರ)ರವರ ಮೂಲಕ ಪವಿತ್ರ ಖುರ್‌ಆನ್‌ನ ಮೂಲ ಅಧಿಕೃತ ಆವೃತ್ತಿಯನ್ನು ಸಂಗ್ರಹಿಸಿ ಸಿದ್ಧಪಡಿಸಿದರು.

(2) ಸರ್ವಶಕ್ತನಾದ ಅಲ್ಲಾಹನು ಹಾಗೆ ಮಾಡದಿದ್ದರೆ, ಖುರ್‌ಆನ್ ಹದೀಸ್‌ಗಳಂತೆಯೇ ಇರುತ್ತಿತ್ತು ಮತ್ತು ಕೆಲವು ಹದೀಸ್‌ಗಳಲ್ಲಿ ಭಿನ್ನಾಭಿಪ್ರಾಯಗಳಿರುವಂತೆಯೇ, ಖುರ್‌ಆನ್ ಬಗ್ಗೆ ಸಹಾಬರವರ ಅಭಿಪ್ರಾಯಗಳು ವಿಭಿನ್ನವಾಗಿರುತ್ತಿತ್ತು. ಮತ್ತು ಪ್ರತಿಯೊಬ್ಬ ಸಹಾಬರವರು ಬರೆದಿರುವಂತಹ ಖುರ್‌ಆನ್‌ನ ಬಗ್ಗೆ ನಾನು ಬರೆದಿರುವ ಖುರ್‌ಆನ್ ಸರಿಯಾಗಿದೆ ಇನ್ನೊಬ್ಬರು ಬರೆದಿರುವ ಖುರ್‌ಆನ್ ತಪ್ಪಾಗಿದೆ ಎಂದು ಹೇಳುತ್ತಿದ್ದರು ಏಕೆಂದರೆ ಪ್ರತಿಯೊಬ್ಬ ಸಹಾಬರವರು ಸಹ ತಪ್ಪು ಮಾಡಬಹುದು. ಪಠ್ಯವನ್ನು ಅರ್ಥಮಾಡಿಕೊಳ್ಳುವುದು ಮತ್ತು ಬರೆಯುವುದು ಪ್ರತಿಯೊಬ್ಬ ಮನುಷ್ಯನ ಕೆಲಸವಲ್ಲ, ಆದ್ದರಿಂದ ಖುರ್‌ಆನ್‌ನ ಅಂತಹ ಲಿಖಿತ ವಚನಗಳಲ್ಲಿ ದೋಷಗಳ ಸಾಧ್ಯತೆ ಇರುತ್ತದೆ. ಹಝ್ರತ್ ಉಸ್ಮಾನ್(ರ) ಈ ಎಲ್ಲಾ ಸಾಧ್ಯತೆಗಳನ್ನು ನಾಶಪಡಿಸಲು ಮತ್ತು ಸುಡಲು ಆದೇಶಿಸಿದರು ಮತ್ತು ಇದೆಲ್ಲವೂ ಅಲ್ಲಾಹನ ನಿಯಂತ್ರಣದಲ್ಲಿ ನಡೆಯುತ್ತಿತ್ತು.

(3) ಖುರ್‌ಆನ್‌ನ ಪ್ರಮಾಣೀಕರಿಸದ ಆವೃತ್ತಿಗಳನ್ನು ಸುಡದಿದ್ದರೆ, ಕಪಟ ವಿಶ್ವಾಸಿಗಳು ಅಥವಾ ಇಸ್ಲಾಂನ ವಿರೋಧಿಗಳು, ಯಹೂದಿಗಳು ಮತ್ತು ಕ್ರಿಶ್ಚಿಯನ್ನರು ತಮ್ಮದೇ ಆದ ಪದಗುಚ್ಛಗಳನ್ನು ರಚಿಸಿ ಅದನ್ನು ಪವಿತ್ರ ಖುರ್‌ಆನ್‌ಗೆ ಸೇರಿಸಬಹುದು ಮತ್ತು ಇದು ನಿಜವಾದ ಖುರ್‌ಆನ್ ಆಗಿದೆ ಎಂದು ಹೇಳಬಹುದು. ಅಲ್ಲಾಹನು ಯಹೂದಿಗಳ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ: **ಯುಸ್ಮೂನ ಕಲಾಮುಲ್ಲಹಿ ಸುಮ್ಮ ಯುಹರ್‍ರಿಫೂನಹೂ ಮಿಮ್ ಬಅದಿ ಮಾ ಅಖಲೂಹು ವಹುಮ್ ಯಅ್‌ಲಮೂನ್ (ಸೂರ ಅಲ್‌ಬಖರ: 76)** (ಓ ಮುಸ್ಲಿಮರೇ) ಅವರು (ಯಹೂದ್ಯರು) ನಿಮ್ಮ ಮಾತನ್ನು ನಂಬುವರೆಂದು ನೀವು ನಿರೀಕ್ಷಿಸುತ್ತೀರಾ? ಅವರ ಪೈಕಿ ಒಂದು ಪಗಂಡದವರು ಅಲ್ಲಾಹನ ವಚನಗಳನ್ನು ಆಲಿಸುತ್ತಾರೆ. ಅನಂತರ ಅದನ್ನು ಅರಿತುಕೊಂಡ ಬಳಿಕ ಬೇಕುಬೇಕೆಂದೇ ಅದರ ತಾತ್ಪರ್ಯವನ್ನು ತಿರುವು ಮುರುವು ಮಾಡುತ್ತಾರಷ್ಟೆ.

ನಂತರ ಮತ್ತೊಂದು ಸ್ಥಳದಲ್ಲಿ ಅಲ್ಲಾಹನು ನುಡಿಯುತ್ತಾನೆ: **ಫವೈಲುಲ್ಲಿಲ್ಲಝೀನ ಯಕ್ತುಬೂನಲ್ ಕಿತಾಬ ಬಿ ಐದೀಹಿಮ್, ಸುಮ್ಮ ಯಅ್‌ಖುಲೂನ ಹಾಝಾ ಮಿನ್ ಇಂದಿಲ್ಲಾಹಿ (ಸೂರತುಲ್ ಬಖರ: 80)** ಅಂದರೆ: ತಮ್ಮ ಸ್ವಂತ ಕೈಗಳಿಂದ ಗ್ರಂಥವನ್ನು ಬರೆದು, ಆ ಮೂಲಕ ತುಚ್ಛವಾದ ಬೆಲೆಯನ್ನು ಪಡೆಯಲಿಕ್ಕಾಗಿ 'ಇದು ಅಲ್ಲಾಹನ ಕಡೆಯಿಂದ ಬಂದುದು' ಎಂದು ಹೇಳುವವರಿಗೆ ನಾಶ ಕಾದಿದೆ. ಅವರ ಕೈಗಳು ಏನನ್ನು ಬರೆದುವೋ ಅದಕ್ಕಾಗಿ ಅವರಿಗೆ ವಿಪತ್ತು ಕಾದಿದೆ. ಅವರು ಏನನ್ನು ಸಂಪಾದಿಸಿದರೋ ಅದಕ್ಕಾಗಿಯೂ ಅವರಿಗೆ ವಿನಾಶ ಕಾದಿದೆ.

ಯಹೂದಿಗಳ ಗುಂಪೊಂದು ಪವಿತ್ರ ಖುರ್‌ಆನ್‌ನ ಪದಗಳನ್ನು ಅದರ ಅರ್ಥವನ್ನು ಬದಲಾಯಿಸುವ ಸಲುವಾಗಿ ಓದುತ್ತಿದ್ದರು. ಅದಕ್ಕಾಗಿಯೇ ಅಲ್ಲಾಹನು ವಿಶ್ವಾಸಿಗಳಿಗೆ ಆಜ್ಞಾಪಿಸಿದ್ದಾನೆ: **ಲಾ ತಖೂಲೂ ರಾಇನಾ ವಖೂಲುನ್ ಝುರ್‌ನ (ಸೂರತುಲ್ ಬಖರ: ವಚನ:105) "ರಾಇನಾ"** ಎಲ್ಲೈ ಸತ್ಯ ವಿಶ್ವಾಸಿಗಳೇ, (ಪೈಗಂಬರರೊಡನೆ) ನೀವು 'ರಾಇನಾ' ಎಂದು ಹೇಳಬೇಡಿರಿ, 'ಉನ್‌ಝುರ್‌ನಾ' ಎಂದು ಹೇಳಿರಿ ಮತ್ತು (ಅವರ ಮಾತುಗಳನ್ನು) ಗಮನವಿಟ್ಟು ಕೇಳಿರಿ.

ಹಝ್ರತ್ ಉಮ್ಮುಲ್ ಮುಮಿನೀನ್(ರ) ವರದಿ ಮಾಡುತ್ತಾರೆ ಪ್ರವದಿ(ಸ)ರವರ ಬಳಿ ಕೆಲವು ಯಹೂದಿಗಳು ಪ್ರವಾದಿ(ಸ) ಬಳಿಗೆ ಬಂದು ಅಸ್ಸಲಾಮ್ ಅಲೈಕುಮ್ ಎಂದು ಹೇಳುವ ಬದಲು ಅವರು ಪ್ರವಾದಿ(ಸ) ರನ್ನು ಉದ್ದೇಶಿಸಿ 'ಸಾಮ್' ಎಂಬ ಪದವನ್ನು ಬದಲಾಯಿಸುತ್ತ "ಅಸ್ಸಾಮು ಅಲೈಕುಮ್" (ಎಂದು ಬದ್‌ದುಆ ನೀಡಿದರು) (ಸಹೀಹ್ ಮುಸ್ಲಿಮ್, ಕಿತಾಬುಸ್ಸಲಾಮ್)

ಈ ಮಾತುಗಳನ್ನು ಪ್ರವಾದಿಯುವರ ಜೀವನದಲ್ಲಿ ಇಸ್ಲಾಂ ವಿರೋಧಿಗಳು ಬದಲಾಯಿಸಿದ್ದರು. ಅಲ್ಲಾಹನ ವಾಗ್ದಾನ, ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಸ್ಮಾನ್(ರ) ಅವರಿಂದ ಸಮಕ್ಕೆತಕ್ಕಂತೆ ಪವಿತ್ರ ಖುರ್‌ಆನ್‌ನ ರಕ್ಷಣೆ ಕಾರ್ಯಯಾಗದಿದ್ದರೆ, ಪವಿತ್ರ ಕುರ್‌ಆನ್ ವಿರುದ್ಧ ಯಾವ ಯಾವ ಷಡ್ಯಂತ್ರಗಳು ನಡೆಯುತ್ತಿದ್ದವೋ ತಿಳಿದಿಲ್ಲ.

**ತೌರಾತ್‌ನಲ್ಲಿ ಬದಲವಣೆಯ ಉದಾಹರಣೆ**

ಯಹೂದಿಗಳು ಮತ್ತು ಕ್ರೈಸ್ತರು ತೌರಾತನ್ನು(ಹಳೆಯ ಮತ್ತು ಹೊಸ ಒಡಂಬಡಿಕೆಗಳು) ಹೇಗೆ ವಿರೂಪಗೊಳಿಸಿದರು ಎಂಬುದಕ್ಕೆ ಕೇವಲ ಒಂದು ಉದಾಹರಣೆಯಾಗಿದೆ.

(1) ತೌರಾತ್‌ಗೆ ಸಂಬಂಧಿಸಿದಂತೆ, ಅದು ಮೂಸ ಅಲೈಹಿಸ್ಸಲಾಮ್‌ರವರ ಮೇಲೆ ಅವತರಿಸಿರುವುದು ಎಂದು ನಂಬಲಾಗಿದೆ, ಈಗ ಹಝ್ರತ್ ಮೂಸ ಅಲೈಹಿಸ್ಸಲಾಮ್‌ರವರ ಮೇಲೆ ಅವತರಿಸಿದ ಗ್ರಂಥದದಲ್ಲಿ ಈ ಕೆಳಗಿನ ಪದಗುಚ್ಛವನ್ನು ಯಾರು ಸೇರಿಸಿದರು? " ದೇವಸ ದಾಸರು ದೇವನ ಆಜ್ಞೆಯಂತೆ ಮೋವಾಬ್ ಎಂಬ ದೇಶದಲ್ಲಿ ನಿಧನರಾದರು....... ಮತ್ತು ಮೂಸನ ನಿಧನದ ಸಮಯ ಆತನ ವಯಸ್ಸು ಒಂದು ನೂರ ಇಪ್ಪತ್ತು ವರ್ಷ ಆಗಿತ್ತು" (ಇಸ್ತಿಸ್‌ನಾ,, ಅಧ್ಯಾಯ 34, ವಚನ-7)

ಮೇಲಿನ ಹೇಳಿಕೆಯು ಮೂಸ(ಅ.ಸ.ಅ)ರವರ ನಂತರ ಸೇರಿಸಿದ ನುಡಿಗಟ್ಟು ಎಂದು ಸೂಚಿಸುತ್ತದೆ. ಇಲ್ಲದಿದ್ದರೆ ಪ್ರವಾದಿ ಮೂಸ(ಅ) ಅವರ ಮರಣದ ನಂತರ ಸ್ವತಃ 120 ವರ್ಷಗಳು ಎಂದು ಹೇಗೆ ಹೇಳಬಹುದು.

ಇಸ್ಲಾಂ ವಿರೋಧಿಗಳು ಪವಿತ್ರ ಖುರ್‌ಆನ್ ಅನ್ನು ವಿರೂಪಗೊಳಿಸಲು ಪ್ರಯತ್ನಿಸುತ್ತಾರೆ ಆದರೆ ಸರ್ವಶಕ್ತನಾದ ಅಲ್ಲಾಹನು ನೀಡಿದ ಸಹಾಯದ ಪ್ರಕಾರ, ಹಝ್ರತ್ ಅಬು ಬಕರ್(ರ) ಮತ್ತು ಹಝ್ರತ್ ಉಸ್ಮಾನ್(ರ) ಅವರ ದಿಟ್ಟ ಮತ್ತು ಸಮಯೋಚಿತ ಕ್ರಮವು ಯಾವುದೇ ವಿರೂಪಗೊಳ್ಳದಂತೆ ಪವಿತ್ರ ಖುರ್‌ಆನ್ ಅನ್ನು ಸುರಕ್ಷಿತವಾಗಿರಿಸಿತು. ಅಲ್‌ಹಮ್‌ದುಲಿಲ್ಲಾಹ್ ಅಲಾ ಝಾಲಿಕ್

ಆದ್ದರಿಂದ, ಅಂತಹ ದೊಡ್ಡ ಭದ್ರತಾ ವ್ಯವಸ್ಥೆಯನ್ನು ಮಾಡುವ ಮೂಲಕ, ಸರ್ವಶಕ್ತನಾದ ಅಲ್ಲಾಹನು ಪ್ರತಿ ಯುಗದಲ್ಲೂ ಪವಿತ್ರ ಖುರ್‌ಆನ್‌ನ ಅಕ್ಷರಶಃ, ವಾತವಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ರಕ್ಷಣೆಗಾಗಿ ತನ್ನ ವಾಗ್ದಾನವನ್ನು ಪೂರೈಸುತ್ತಲೇ ಇರುತ್ತಾನೆ ಎಂದು ಸರ್ವಶಕ್ತನಾದ ಅಲ್ಲಾ ಸಾಬೀತುಪಡಿಸಿದನು. ಇನ್‌ಶಾಅಲ್ಲಾಹ್

**(ಆಕ್ಷೇಪಣೆ ಸಂಖ್ಯೆ-5)** ಹಝ್ರತ್ ಅಲಿ(ರ) ಅವರು ಪವಿತ್ರ ಖುರ್‌ಆನ್ ಅನ್ನು ಸರಿಪಡಿಸಿದ್ದಾರೆ ಎಂಬ ಅನುಮಾನದೊಂದಿಗೆ ಆಕ್ಷೇಪಣೆಯನ್ನು ಎತ್ತಿದರು.

**ಉತ್ತರ:** ಇದು ಅಲ್ಲಾಹನ ವಾಗ್ದಾನಕ್ಕೆ ವಿರುದ್ಧವಾಗಿದೆ, ಅಲ್ಲಾಹನು ಇದನ್ನು ಎಂದಿಗೂ ಅನುಮತಿಸಲಿಲ್ಲ. ಇದು ಹಝ್ರತ್ ಅಲಿ(ರ)ರವರ ಮೇಲೆ ಸುಳ್ಳು ಅಪವಾದವಾಗಿದೆ. ಒಂದು ವೇಳೆ ಈ ತಿದ್ದುಪಡಿ ಮಾಡಿರುವ ಮಾತು ಸರಿಯಾಗಿದ್ದರೆ ಆಕ್ಷೇಪಣೆದಾರರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ನೀಡಿ.

(1) ಆಕ್ಷೇಪಿಸುವವರ ಪ್ರಕಾರ, ಹಝ್ರತ್ ಅಲಿ(ರ) ಖುರ್‌ಆನ್ ಅನ್ನು ಸರಿಪಡಿಸಿದ್ದರೆ, ಶಿಯಾಗಳು ಅಧಿಕಾರದಲ್ಲಿರುವ ದೇಶಗಳು ಹಝ್ರತ್ ಅಲಿ(ರ)ರವರ ಪವಿತ್ರ ಖುರ್‌ಆನ್‌ನ ಪರಿಷ್ಕೃತ ಆವೃತ್ತಿಯನ್ನು ಏಕೆ ಪ್ರಕಟಿಸುವುದಿಲ್ಲ, ಆದರೆ ಇರಾನ್ ಮತ್ತು ಇತರ ಶಿಯಾ ಸಂಸ್ಥೆಗಳು ಅವರು ಅಹ್ಲ್-ಎ-ಸುನ್ನತ್ ಅವರ ಬಳಿ ಇರುವ ಖುರ್‌ಆನ್ ಅನ್ನು ಪ್ರಕಟಿಸುತ್ತಾರೆ, ಪಠಿಸುತ್ತಾರೆ.

(2) ಹಝ್ರತ್ ಅಲಿ(ರ) ದೇವರ ಸಿಂಹ ಮತ್ತು ನಾಲ್ಕನೇ ಖಲೀಫರು ತಮ್ಮ ಖಿಲಾಫತ್ ಕಾಲದಲ್ಲಿ ಸರಿಪಡಿಸಿದ ಖುರ್‌ಆನ್ ಅನ್ನು ಏಕೆ ಬಳಸಲಿಲ್ಲ ಮತ್ತು ನಿಮ್ಮ ಸ್ಮರಣೆಯಲ್ಲಿರುವ ಖುರ್‌ಆನ್ ಅನ್ನು ಅಳಿಸಿಹಾಕಲು ಮತ್ತು ಈ ಸರಿಪಡಿಸಿದ ಖುರ್‌ಆನ್ ಅನ್ನು ನೆನಪಿಟ್ಟುಕೊಳ್ಳಲು ಅಂದಿನ ಮುಸ್ಲಿಮರಿಗೆ ಏಕೆ ಹೇಳಲಿಲ್ಲ? ನಮಗೆ ಇಸ್ಲಾಮಿನ ಇತಿಹಾಸದಲ್ಲಿ ಇಂತಹ ಒಂದು ವರದಿಯು ಸಿಗುವುದಿಲ್ಲ, ಆದ್ದರಿಂದ, ಈ ಆಕ್ಷೇಪಣೆಯು ತುಂಬಾ ತಪ್ಪು ಮತ್ತು ಅಮಾನ್ಯವಾಗಿದೆ, ಸತ್ಯಾಂಶ ಏನೆಂದರೆ ಪವಿತ್ರ ಖುರ್‌ಆನ್ ಅನ್ನು ನಾನು ಸ್ವತಃ ರಕ್ಷಿಸುವೆನು ಎಂದು ಅಲ್ಲಾಹನು ವಾಗ್ದಾನ ಮಾಡಿದ್ದಾನೆ ಅದರಲ್ಲಿ ಯಾವುದೇ ರೀತಿಯ ತಿದ್ದುಪಡಿ ಮಾಡಲು ಸಾಧ್ಯವಿಲ್ಲ ಅದು ಖಿಯಾಮತ್ ವರೆಗೂ ಸುರಕ್ಷಿತವಾಗಿರುವುದು.

**(ಆಕ್ಷೇಪಣೆ ಸಂಖ್ಯೆ 6)** ಮುಸ್ಲಿಮರು ಪವಿತ್ರ ಖುರ್‌ಆನ್‌ನ ಅನುವಾದ ಮತ್ತು ವ್ಯಾಖ್ಯಾನದಲ್ಲಿ ಭಿನ್ನಾಭಿಪ್ರಾಯ ಹೊಂದಿದ್ದಾರೆ ಮತ್ತು ಮೂಲಭೂತವಾದಿಗಳು ಮತ್ತು ಭಯೋತ್ಪಾದಕರು ಮಾನವೀಯತೆಗೆ ಅಪಾಯಕಾರಿಯಾದ ಈ ತಪ್ಪು ವ್ಯಾಖ್ಯಾನಗಳ ಲಾಭವನ್ನು ಪಡೆಯುತ್ತಿದ್ದಾರೆ.

**ಉತ್ತರ:** ಅಲ್ಲಾನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದ್ದಾನೆ: **ಇನ್ನಾ ಅನ್‌ಝುಲ್‌ನಾಹು ಖುರ್‌ಆನನ್ ಅರಬೀಯಲ್ಲ ಅಲ್ಲಕುಮ್ ತಅ್‌ಖಿಲೂನ್ (ಸೂರ ಯೂಸುಫ್: 3)** ಅಂದರೆ ನಾವು ಪದೇ ಪದೇ ಪಾರಾಯಣ ಮಾಡಲ್ಪಡುವ ಈ ಖುರ್‌ಆನ್ ಅನ್ನು ಸ್ಪಷ್ಟವಾದ ಅರಬಿ ಭಾಷೆಯಲ್ಲಿ ಅವತೀರ್ಣಗೊಳಿಸಿದ್ದೇವೆ– ನೀವು ಮನವರಿಕೆ ಮಾಡಲಿಕ್ಕಾಗಿ.

ಈಗ ಪ್ರಶ್ನೆಯೆಂದರೆ ಮೂಲಭೂತವಾದಿಗಳು ಮತ್ತು ಭಯೋತ್ಪಾದಕರು ಅದರ ತಪ್ಪು ವ್ಯಾಖ್ಯಾನಗಳನ್ನು ಮಾಡುತ್ತಿರುವರು ಹಾಗೂ ಅದರಿಂದ ಲಾಭವನ್ನು ಪಡೆಯುವವರನ್ನು ತಡೆಯದವರ ತಪ್ಪೇ ಹೊರತು ಪವಿತ್ರ ಖುರ್‌ಆನ್‌ನದಲ್ಲ!!

ಓರ್ವ ವ್ಯಕ್ತಿಯು ದೇಶದ ಕಾನೂನು ಮತ್ತು ಸಂವಿಧಾನದ ಯಾವುದೇ ನಿಬಂಧನೆಗಳನ್ನು ತಪ್ಪಾಗಿ ಅರ್ಥೈಸಿಕೊಂಡು ಜನರನ್ನು ದಾರಿ ತಪ್ಪಿಸಿದರೆ ಅದು ತಪ್ಪು ದಾರಿ ತಪ್ಪಿಸುವವರ ತಪ್ಪೇ ಹೊರತು ಕಾನೂನಿನದ್ದಲ್ಲ!

ಆಕ್ಷೇಪಿಸುವವರಂತೆ, ಕೆಲವರು ಈ ನಿಬಂಧನೆಯೊಂದಿಗೆ ತಪ್ಪುದಾರಿಗೆಳೆಯಲು ಪ್ರಯತ್ನಿಸುತ್ತಾರೆ ಎಂಬ ಕಾರಣದಿಂದ ಈ ನಿಬಂಧನೆಯನ್ನು ಸಂವಿಧಾನದಿಂದ ತೆಗೆದುಹಾಕಬೇಕೆಂದು ಯಾರಾದರೂ ಒತ್ತಾಯಿಸಿದರೆ, ಅವರ ಬೇಡಿಕೆಯು ಸ್ವೀಕಾರಾರ್ಹವೇ? ಅಸಾಧ್ಯ.

ಇದನ್ನು ಇನ್ನೊಂದು ಉದಾಹರಣೆಯಿಂದಲೂ ಅರ್ಥಮಾಡಿಕೊಳ್ಳಬಹುದು, ಉದಾಹರಣೆಗೆ, ಒಬ್ಬ ಮೂರ್ಖ ಮತ್ತು ಅಜ್ಞಾನಿ ಮುಸಲ್ಮಾನನು ಖುರಾನ್‌ನಲ್ಲಿ ಇದನ್ನು ಸ್ಪಷ್ಟವಾಗಿ **ಲಾ ತಖ್‌ರುಬುಸ್ಸಲಾತ (ಸೂರ ಅನ್ನಿಸಾಅ್:44)** ಎಂದು ಬರೆಯಲಾಗಿದೆ. ಮತ್ತು ಇನ್ನೊಂದು ಸ್ಥಳದಲ್ಲಿ **ಫ ವೈಲುಲ್ಲಿಲ್ ಮುಸಲ್ಲೀನ್ (ಸೂರ ಅಲ್‌ಮಾಊನ್:5)** ಅಂದರೆ ನಮಾಝ್‌ನ (ಪ್ರಾರ್ಥನೆಯ) ಹತ್ತಿರ ಹೋಗಬೇಡಿ ಮತ್ತು ಅಲ್ಲಿಗೆ ಹೋದವರು ನಾಶವಾಗುತ್ತಾರೆ, ಆದ್ದರಿಂದ ಮುಸ್ಲಿಮರು ಪ್ರಾರ್ಥನೆ ಸಲ್ಲಿಸಬಾರದು. ಈಗ ಮತ್ತೋರ್ವ ಅಜ್ಞಾನಿಯು ಪವಿತ್ರ ಖುರ್‌ಆನ್‌ನ ಈ ಎರಡು ವಚನಗಳನ್ನು ಅಳಿಸಬೇಕು ಏಕೆಂದರೆ ಮುಸ್ಲಿಮರು ಇದರಿಂದ ಮೋಸ ಹೋಗುತ್ತಾರೆ, ಎಂದು ಬೇಡಿಕೆ ನೀಡಿದರೆ ಈ ಬೇಡಿಕೆಯು ಮಾನ್ಯವಾಗುತ್ತದೆಯೇ?

ಹೀಗೆ ಈ ಎರಡು ಉದಾಹರಣೆಗಳಿಂದ ಆಕ್ಷೇಪಿಸುವವರ ಆಕ್ಷೇಪಣೆಗಳು ತಪ್ಪು ಮತ್ತು ಆಧಾರರಹಿತ ಮತ್ತು ವಾಸ್ತವಾಂಶವನ್ನು ಹೊಂದಿಲ್ಲ ಎಂದು ತಿಳಿಯಬಹುದು. (ಶೇಷ)


**ವಿಶೇಶ ಸೂಚನೆ**

**"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**

**ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**


***(ಪುಟ ಸಂಖ್ಯೆ 09ರ ಉಳಿದ ಭಾಗ)***

ನೆಮ್ಮದಿಯಿಂದ ನಡೆದಾಡುವ ದೇವದೂತರು ನೆಲೆಸಿರುತ್ತಿದ್ದರೆ ಅಂದರೆ ಎಲ್ಲ ಮನುಷ್ಯರು ದೈವಭಕ್ತರಾಗಿರುತ್ತಿದ್ದರೆ ನಾವು ಅವರಲ್ಲಿ ಪ್ರತಿಯೊಬ್ಬರ ಮೇಲೆ ನಮ್ಮ ಬೋಧನೆಯನ್ನು ಅವತರಿಸುತ್ತಿದ್ದೆವುಮ, ನಾವು ಅವರಿಗೆ ಆಕಾಶದಿಂದ ಒಬ್ಬ ದೇವದೂತನನ್ನು ಸಂದೇಶವಾಹಕನಾಗಿ ಕಳುಹಿಸುತ್ತಿದ್ದೆವು. ಅಂದರೆ ಹೀಗೆ ಆಗತ್ತಿದ್ದರೆ ಒಬ್ಬ ಪ್ರವಾದಿಯನ್ನು ಒಂದು ಜನಾಂಗಕ್ಕೆ ಕಳುಹಿಸಲಾಗುತ್ತಿರಲಿಲ್ಲ ಬದಲಿಗೆ ಎಲ್ಲರು ಪ್ರವಾದಿಗಳೆ ಆಗಿರುತ್ತಿದ್ದರು ಹೀಗೆ ನಿರಾಕರಣೆಯ ಅಥವಾ ಅಪನಂಬಿಕೆಯ ಪ್ರಶ್ನೆಯೇ ಇರುತ್ತಿರಲಿಲ್ಲ. ಆದರೆ ಇಡೀ ಪ್ರಪಂಚವು ಸಜ್ಜನರಾಗಲಿಲ್ಲ ಮತ್ತು ಅಲ್ಲಾಹನು ಪ್ರವಾದಿಗಳ ಸರಪಳಿಯನ್ನು ಮುಚ್ಚಲಿಲ್ಲ.

**ಹುದವ್ವ ರಹಮತಲ್ಲಿಲ್‌ಖೌಮಿಯ್ಯೂ ಮಿನೂನ್** ನಲ್ಲಿರುವ ಎರಡನೇಯ ಅಂಶವೇನೆಂದರೆ, ಭಿನ್ನಭಿಪ್ರಾಯ ಮಾಡುವವರಿಗೆ ನೀವು ಪವಿತ್ರ ಖುರ್‌ಆನ್‌ನ ಪ್ರಕಾರ ಅವರ ಭಿನ್ನಾಭಿಪ್ರಾಯಗಳನ್ನು ತೆಗೆದುಹಾಕುವುದು ಮತ್ತು ದೈವಭಕ್ತರಿಗೆ (ಮೂಮಿನ್‌ರಿಗೆ) ಈ ಖುರ್‌ಆನ್ ಅನ್ನು ಪ್ರಗತಿ ಮತ್ತು ಕರುಣೆಯ ಮೂಲವನ್ನಾಗಿ ಮಾಡುವುದು ನಿಮ್ಮ ಕೆಲಸವಾಗಿದೆ. **(ತಫ್ಸೀರ್ ಕಬೀರ್, ಸಂಪುಟ-4, ಪುಟ-189, ಖಾದಿಯಾನ್ 2010)**

**ಆಡಂಬರ ಮತ್ತು ತೋರ್ಪಡಿಕೆಗೋಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.**

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಆಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ-3, ಪುಟ-284) (ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

***127 ನೇ ಜಲ್ಸಾ ಸಾಲಾನ ಖಾದಿಯಾನ್***

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮುಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

**ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು**

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 09 June 2022, Issue No. 23

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 22ರ ಉಳಿದ ಭಾಗ)**

* ಅದೇ ರೀತಿ ಸಮಾರಂಭದಲ್ಲಿ ಪಾಲ್ಗೊಂಡ ಹಲವು ಅತಿಥಿಗಳು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದು ನಮ್ಮ ಸುದೈವವಾಗಿದೆ ಮತ್ತು ಅವರು ಹೇಳಿದರು. ಹುಝೂರೆ ಅನ್ವರ್ ನಿಸ್ಸಂಶಯವಾಗಿಯೂ ಶಾಂತಿಯ ರಾಯಭಾರಿಯಾಗಿದ್ದಾರೆ ಮತ್ತು ಓರ್ವ ಪ್ರಭಾವಿ ವ್ಯಕ್ತಿಗಳಾಗಿದ್ದಾರೆ ಮಾನವಿಯತೆಯ ನಿಕಟ ಬಂಧುಗಳು ಮತ್ತು ಕನಿಷ್ಠ ಸಂಬಂಧವುಳ್ಳವರಾಗಿದ್ದಾರೆ. ಹುಝೂರರ ಭಾಷಣದಿಂದ ತುಂಬಾ ಭರವಸೆ ಮೂಡಿದೆ. ಅದರಲ್ಲೇನು ಸಂಶಯವಿಲ್ಲ. ಹುಝೂರ್ ಲೋಕದ ಸಮಸ್ಯೆಗಳನ್ನು ತೀಕ್ಷ್ಣ ದೃಷ್ಟಿಯಿಂದ ನೋಡುವವರಾಗಿದ್ದಾರೆ ಮತ್ತು ಅದರ ಪರಿಹಾರ ಮಾರ್ಗವು ತೋರಿಸುವವರಾಗಿದ್ದಾರೆ.

* ಸ್ಥಳೀಯ ಜಮಅತಿನ ಅಧ್ಯಕ್ಷರು ಹೇಳುತ್ತಾರೆ. ಈ ಸಮ್ಮೇಳನದ ಮುಂಚಿತವಾಗಿ ನಾವು ಸ್ಥಳೀಯ ಮಾಧ್ಯಮದವರನ್ನು ಸಂಪರ್ಕಿಸಿದ್ದೆವು. ಆದರೆ ಅಷ್ಟೊಂದು ಉತ್ತಮ ರೀತಿಯಲ್ಲಿ ಸ್ಪಂಧಿಸಬಹುದೆಂದು ನಿರೀಕ್ಷೆ ಮಾಡಿರಲಿಲ್ಲ. ಆದರೆ ಅಲ್ಲಾಹನು ಖಲೀಫರ ಅನುಗ್ರಹಿತ ವ್ಯಕ್ತಿತ್ವದ ಪರಿಣಾಮವಾಗಿ ಎಂತಹ ಸನ್ನಿವೇಶ ಉಂಟಾಯಿತೆಂದರೆ ನಮ್ಮ ನಿರೀಕ್ಷೆಯೂ ಮೀರಿ ಫ್ರೆಂಚ್ ಮತ್ತು ಇಲೆಕ್ಟ್ರಾನಿಕ್ ಮಾಧ್ಯಮದವರು ಬಂದು ತಲುಪಿದರು. ಜರ್ಮನಿಯ ಒಬ್ಬ ದೊಡ್ಡ ಚಾನಲ್ ಸ್ಯಾಟಲೈಟ್–1 ಅವರ ಆಗಮನವನ್ನು ನಾವೂ ಊಹಿಸಿಯೂ ಇರಲಿಲ್ಲ. ಅದರೆ ಅವರ ಪ್ರತಿನಿಧಿ ಆಗಮಿಸಿದರು ಮತ್ತು ಉದ್ಘಾಟನಾ ಸಮಾಚಾರವನ್ನು ಬಿತ್ತರಿಸಿದರು. ಅದೇ ರೀತಿ ರಾಜ್ಯದ ರೇಡಿಯೋ ಚಾನಲ್ ಎನ್.ಡಿ.ಆರ್. ಅವರು ಸಹ ಅದರ ಸುದ್ದಿ ಬಿತ್ತರಿಸಿದರು. ರೇಡಿಯೋದಲ್ಲಿಯೂ ಆ ಕುರಿತು ಮತ್ತೆ ಮತ್ತೆ ಸುದ್ಧಿ ಪ್ರಸಾರ ಮಾಡಿದರು. ವಿವಿಧ ಪತ್ರಿಕೆಗಳು ಮಸೀದಿಯ ನಿರ್ಮಾಣ ಕುರಿತು ಉತ್ತಮ ಸಮಾಚಾರ ಮತ್ತು ಲೇಖನಗಳು ಪ್ರಕಟಿಸಿದರು. ಹುಝೂರೆ ಅನ್ವರ್ ಅವರ ಭಾಷಣದ ಕೆಲ ಆಯ್ದ ಭಾಗಗಳನ್ನು ಅತ್ಯಂತ ಸಕಾರಾತ್ಮಕ ರೀತಿಯಲ್ಲಿ ಪ್ರಕಟಿಸಿದರು. ಹೀಗೆ ಲಕ್ಷಾಂತರ ಜನರಿಗೆ ಅಹ್ಮದಿಯಾ ಜಮಾಅತಿನ ಪರಿಚಯ ಲಭ್ಯವಾದಂತಾಯಿತು.

### ಮಸ್ಜಿದ್ ಬೈತುಲ್ ಖಾದರ್ (Vechta) ಉದ್ಘಾಟನೆ ಮತ್ತು ಮಸ್ಜಿದ್ ದಾರುಸ್ಸಲಾಮ್ (Isemohen) ಅಡಿಗಲ್ಲು ಸಮಾರಂಭಗಳ ಬಗ್ಗೆ ಮಾಧ್ಯಮದವರ ಸಮಾಚಾರ ಬಿತ್ತರಿಕೆ

* Oldem burgische ವಾರ್ತಾ ಪತ್ರಿಕೆ volkszeitung ನಲ್ಲಿ ಮಸ್ಜಿದ್ ಬೈತುಲ್ ಖಾದಿರ್ ಉದ್ಘಾಟನೆಯ ಬಗ್ಗೆ ಈ ಕೆಳಗಿನಂತೆ ಸುದ್ಧಿ ಬಿತ್ತರವಾಯಿತು.

ಖಲೀಫರು Vechta ನಲ್ಲಿ ಹೊಸ ಮಸೀದಿಯನ್ನು ಉದ್ಘಾಟಿಸುತ್ತಿದ್ದಾರೆ. ಇಂದು ಅಹ್ಮದಿಯಾ ಜಮಾಅತ್ ಸಂಭ್ರಮಿಸುತ್ತಿದೆ. ಅವರ ನೇತಾರರ ಭಾಷಣ ಲೋಕಾದಾದ್ಯಂತ ಬಿತ್ತರಗೊಳ್ಳುತ್ತಿದೆ. ಈ ಇಸ್ಲಾಮಿ ಸಂಘಟನೆಯು ತಮ್ಮ ಸ್ವಂತ ಟಿ.ವಿ ಚಾನೆಲ್ ಒಂದನ್ನು ನಡೆಸುತ್ತಿದೆ. ಹೊಸ ಕಟ್ಟಡ ನಿರ್ಮಾಣದ ಖರ್ಚು ಚಂದಾ ಮೂಲಕ ಸಂಗ್ರಹಿಸಲಾಗಿದೆ.

Vechta, ಹೊಸ ಕಟ್ಟಡದ ಕಚೇರಿಯಲ್ಲಿ ಒಂದು ಹಲಗೆ ಬಿದ್ದಿರುತ್ತದೆ. ಅದರ ಮೇಲಿನ ಬರಹ ಹೀಗಿದೆ. "ಮಸ್ಜಿದ್ ಬೈತುಲ್ ಖಾದಿರ್" ಅದರ ಅನುವಾದ "ಸರ್ವ ಸಮರ್ಥನಾದ ಅಲ್ಲಾಹನ ಗೃಹ" ಅಹ್ಮದಿಯಾ ಮುಸ್ಲಿಮ್ ಜಮಾಅತ್ ಅದನ್ನು ಹೊರಗಿನ ಗೋಡೆಯ ಮೇಲೆ ಹಾಕಲಿದೆ.

ಪಂಚಮ ಖಲೀಫರಾದ ಹಝುರತ್ ಮಿರ್ಝಾ ಮಸ್ರೂರ್ ಅಹ್ಮದ್ ಮಸೀದಿಯನ್ನು ಉದ್ಘಾಟಿಸುವರು. ಈ ಮುಂಚೆ ಅಕ್ಟೋಬರ್ 2011 ರಲ್ಲಿ ಸ್ವಯಂ ಅವರೇ ಈ ಮಸೀದಿಯ ಅಡಿಗಲ್ಲನ್ನು ಹಾಕಿದ್ದರು.

ಈ ಮಸೀದಿಯಲ್ಲಿ ಸ್ತ್ರೀಯರಿಗೆ ಮತ್ತು ಪುರುಷರಿಗೆ ಎಂದು ಪ್ರತ್ಯೇಕ 65 ಚ.ಮೀ. ನ ನಮಾಝಿನ ಕೋಣೆಗಳಿವೆ. ಅದಲ್ಲದೆ ಕಟ್ಟಡದಲ್ಲಿ ಎರಡು ಕಚೇರಿಗಳು, ಎರಡು ಸ್ನಾನ ಗೃಹ, ಶೌಚಾಲಯದೊಂದಿಗೆ ಒಂದು ಗ್ರಂಥಾಲಯ ಹಾಗೂ ವಿವಿದ್ದೋದ್ದೇಶಿತ ಹಾಲ್‌ಗಳಿವೆ.

* ಅದೇ ವಾರ್ತಾಪತ್ರಿಕೆ old 9 ಜೂನ್ 2015 ರ ಸಂಚಿಕೆಯಲ್ಲಿ ಮಸ್ಜಿದ್ ಬೈತುಲ್ ಖಾದಿರ್ ಉದ್ಘಾಟನೆಯ ಸುದ್ಧಿ ಪ್ರಕಟಿಸಿತು.

Vechta ದ ಅಹ್ಮದಿ ಮುಸಲ್ಮಾನರಿಗೆ ಇದೊಂದು ಮಹತ್ತರವಾದ ದಿನವಾಗಿದೆ. ಅವರು ಲೋಕದಾದ್ಯಂತ ಸಂಘಟನೆಗಳನ್ನು ಹೊಂದಿವರಾಗಿದ್ದಾರೆ. ಜಿಲ್ಲೆಯು ಕೇಂದ್ರ ನಗರಭಾಗದಲ್ಲಿ ಒಂದು ಹೊಸ ಮಸೀದಿಯುನ್ನು ಉದ್ಘಾಟಿಸಲಿದ್ದಾರೆ. ನಸೀರ್ ಬಟ್ ಅವರು Vechta ನಗರದ 154 ಅಹ್ಮದಿಯರ ಅಧ್ಯಕ್ಷರಾಗಿದ್ದಾರೆ, ಅವರು ಈ ಸಂದರ್ಭದಲ್ಲಿ ರಾಜಕೀಯ, ರಾಜಕೀಯೇತರ ಅತಿಥಿಗಳನ್ನು ಸ್ವಾಗತ ಬಯಸಿದ್ದಾರೆ. ಅವರು ಹೇಳಿದರು. ಶೀಘ್ರದಲ್ಲಿಯೇ ಅವರು ಒಂದು ದಿನ ಮಸೀದಿಯ Open Day (ಉದ್ಘಾಟನಾ ದಿವಸ) ಕ್ಕಾಗಿ ಆಹ್ವಾನಿಸುವ ಉದ್ದೇಶ ಹೊಂದಿದ್ದಾರೆ.

* ಅದೇ ವಾರ್ತಾ ಪತ್ರಿಕೆ Vilkszeitung ಜೂನ್ 2015 ರ ಒಂದು ಸುದ್ಧಿ ಸಮಾಚಾರದಲ್ಲಿ ಬೈತುಲ್ ಖಾದಿರ್ ಉದ್ಘಾಟನೆಯ ಸಮಾಚಾರ ತಿಳಿಸುತ್ತಾ ಬರೆದರು. ಖಲೀಫ ಸಾಹೇಬರು Vechta ದಲ್ಲಿ ಮಸೀದಿಯನ್ನು ಉದ್ಘಾಟಿಸುತ್ತಿದ್ದಾರೆ.

ಅಹ್ಮದಿ ಮುಸಲ್ಮಾನರು ತನ್ನ ನೇತಾರರೊಂದಿಗೆ ಮತ್ತು 150 ಕ್ಕಿಂತ ಹೆಚ್ಚು ಅತಿಥಿಗಳೊಂದಿಗೆ ಉದ್ಘಾಟನಾ ಸಮಾರಂಭವನ್ನು ಆಯೋಜಿಸಿದ್ದಾರೆ.

ಅಹ್ಮದಿಯಾ ಮುಸ್ಲಿಂ ಜಮಾಅತ್‌ನ ಮುಖಂಡರು ನಿನ್ನೆ ಸಂಜೆ Vechta ನಗರದಲ್ಲಿ ಒಂದು ಹೊಸ ಮಸೀದಿಯನ್ನು ಉದ್ಘಾಟಿಸಿದರು. ಹಝ್ರತ್ ಮಿರ್ಝಾ ಮಸೂರ್ ಅವರು ಜಮಾಅತ್ ಸದಸ್ಯರುಗಳಿಗೆ ಉಪದೇಶ ನೀಡಿದರು. ಇದೀಗ ಮೊದಲಿಗಿಂತ ಹೆಚ್ಚು ಸಾಮಾಜಿಕ ಪ್ರಗತಿಗೋಸ್ಕರ ಗಮನಹರಿಸಬೇಕು. ಖಲೀಫರು ಅತಿಥಿಗಳ ಮುಂದೆ ಅದರ ಸಂಖ್ಯೆ 150 ಸಮೀಪವಿತ್ತು. ಅವರಲ್ಲಿ ವಿವಿಧ ವರ್ಗಗಳಿಗೆ ಸೇರಿದ ಜನರಿದ್ದರು. ಅವರನ್ನು ಪ್ರೀತಿ ಪಸರಿಸಲು ಮತ್ತು ಇತರ ಧರ್ಮಿಯರೊಂದಿಗೆ ಸಮಾನತೆಯಿಂದ ಕಾಣುವ ಶಿಕ್ಷಣ ನೀಡಿದರು. ಅಹ್ಮದಿಯ ಮುಸ್ಲಿಂ ಜಮಾಅತಿನ ಹೇಳಿಕೆ ಪ್ರಕಾರ ಈ ಜಮಾಅತಿನ ಮಿಲಿಯನ್‌ಗಟ್ಟಲೆ ಸದಸ್ಯರಿದ್ದಾರೆ. Vechta ನಲ್ಲಿ ಅವರ ಸಂಖ್ಯೆ 154 ಇದೆ.

ಈ ಸಮಾಚಾರ ಪತ್ರಿಕೆಯ ಸಮಾಚಾರದೊಂದಿಗೆ ಹುಝೂರೆ ಅನ್ವರ್ ಅವರ ಚಿತ್ರವು ಪ್ರಕಟಿಸಿತು. ಅವರಲ್ಲಿ ನಗರದ ಮೇಯರ್‌ರಾದ Claus Dalinghaus ಹುಝೂರೆ ಅನ್ವರ್ ಅವರ ಸೇವೆಯಲ್ಲಿ ಒಂದು ಉಡುಗೊರೆ ಪ್ರಸ್ತುತಪಡಿಸುತ್ತಿದ್ದರು.

* ಅದೇ ವಾರ್ತೆ ಪತ್ರಿಕೆ "ಖಲೀಫ ಸಾಹೇಬರು ಧರ್ಮ ಧರ್ಮಗಳ ಮಧ್ಯ ಸಮಾನತೆಯಿಂದ ವರ್ತಿಸುವ ಕುರಿತು ಉಪದೇಶ ನೀಡಿದರು. ಶೀರ್ಷಿಕೆಯಿಂದ ವಿವರ ನೀಡುತ್ತಾ ಮತ್ತೊಂದು ಸಮಾಚಾರ ಪ್ರಕಟಿಸಿತು. ಅಹ್ಮದಿಯಾ ಮುಸ್ಲಿಂ ಜಮಾಅತಿನ ಲೋಕನಾಯಕರು ಮುಸಲ್ಮಾನರಿಗೆ ಏಕತೆಗಾಗಿ ಕರೆ ನೀಡಿದರು.

150 ಕ್ಕಿಂತ ಹೆಚ್ಚು ಅತಿಥಿಗಳು Vechta ದ ಮಸೀದಿಯನ್ನು ಉದ್ಘಾಟಿಸಲು ಬಂದಿರುತ್ತಾರೆ. ಈ ಮಸೀದಿಯ ಹೆಸರು "ಸರ್ವ ಸಮರ್ಥನಾದ ಅಲ್ಲಾಹನ ಗೃಹ ಎಂದಾಗಿದೆ. ಅಹ್ಮದಿಯಾ ಮುಸ್ಲಿಮರು ಈ ದಿನಕ್ಕಾಗಿ ಕಾದು ಕುಳಿತಿದ್ದರು. ಅವರು ಘೋಷಣೆಗಳೊಂದಿಗೆ ಮಿರ್ಝಾ ಮಸ್ರೂರ್ ಅಹ್ಮದ್‌ರವರನ್ನು ಸ್ವಾಗತಿಸಿದರು. ಬಾಲಕರು ಸ್ವಾಗತ ಗೀತೆಗಳನ್ನು ಹಾಡುತ್ತಿದ್ದರು. ಜೊತೆಯಲ್ಲಿ ಧ್ವಜಗಳನ್ನು ಹಾರೈಸುತ್ತಿದ್ದರು. ಖಲೀಫತುಲ್ ಮಸೀಹ್ ಮಸೀದಿಯ ಹೊರಗೋಡೆಯಲ್ಲಿ ಸ್ಥಾಪಿಸಲಾದ ಹಲಗೆಯಿಂದ ಪರದೆಯನ್ನು ಅನಾವರಣ ಮಾಡುತ್ತಿದ್ದಾರೆ. ಆ ಹಲಗೆಯ ಮೇಲೆ "ಮಸ್ಜಿದ್ ಬೈತುಲ್ ಖಾದಿರ್" ಎಂದು ಬರೆಯಲ್ಪಟ್ಟಿದೆ. ಅಂದರೆ ಸರ್ವಸಮರ್ಥನಾದ ಅಲ್ಲಾಹನ ಗೃಹ" ಅದಾದ ನಂತರ ಖಲೀಫರು ನಮಾಝ್‌ಗೋಸ್ಕರ ಮಸೀದಿಗೆ ತೆರಳಿದರು.

**(ಮುಂದುವರಿಯುವುದು)**

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**
**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.